'ಮಿಸ್ಟರ್ ಫೋಕ್‌ಲೋರ್'

ಡಾ.ಪಿ.ಕೆ.ರಾಜಶೇಖರ



ಪ್ರೊ. ಮೈಸೂರು ಕೃಷ್ಣಮೂರ್ತಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೫೮

‘ಮಿಸ್ಟರ್ ಫೋಕ್‌ಲೋರ್’

ಡಾ. ಪಿ.ಕೆ. ರಾಜಶೇಖರ

ಪ್ರೊ. ಮೈಸೂರು ಕೃಷ್ಣಮೂರ್ತಿ

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦ ೦೫೪

Mr.Folklore Dr. P.K. Rajashekhara
- A pen Portrait by **Pr. Mysore Krishnamurthy,**
Published by **Karnataka Janapada Parishat,** #1, Jaladarshini Layout, Near M.S. Ramaiah Hospital Main Gate, New BEL Road, Bangalore - 560 054.
Phone: 080-23605033. Janapada Loka: 27201143

Pages: 52 Price: Rs.20/- Year: 2011

ಪ್ರಥಮ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : ೫೨
ಬೆಲೆ : ರೂ.೨೦/- (ಇಪ್ಪತ್ತು ರೂಪಾಯಿಗಳು)

ಮುದ್ರಕರು: 'ವರ್ಣ ಸಲ್ಯೂಷನ್ಸ್', ನಂ.15/1ಬಿ, "ಲಕ್ಷ್ಮಿನಿವಾಸ",
14ನೇ ಅಡ್ಡರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10,
ದೂ: 080-42123547/48, E-mail: vernasolutions@gmail.com

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಪ್ರೊ. ಮೈಸೂರು ಕೃಷ್ಣಮೂರ್ತಿ** ಅವರು **'ಮಿಸ್ಟರ್ ಫೋಕ್‌ಲೋರ್ ಡಾ.ಪಿ.ಕೆ.ರಾಜಶೇಖರ'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧.೦೩.೨೦೧೧

ಜಿ.ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಡಾ. ಪಿ.ಕೆ.ರಾಜಶೇಖರ

ಕನ್ನಡದ ಪ್ರಥಮ ಶ್ರೇಣಿಯ ಜಾನಪದ ವಿದ್ವಾಂಸರಲ್ಲಿ ಡಾ.ಪಿ.ಕೆ. ರಾಜಶೇಖರ ಅವರೂ ಒಬ್ಬರು. 'ಜಾನಪದ ಜೋಗಿ', 'ಶ್ರೀಮಾನ್ ಜಾನಪದ' (Mr.Folklore), 'ಕನ್ನಡದ ಎಲ್ಯಾಸ್ ಲೋನ್‌ರಾಟ್', 'ಕನ್ನಡ ಜನಪದ ಗಾಯಕ ರತ್ನ' ಇತ್ಯಾದಿ ಸಾರ್ಥಕ ಬಿರುದುಗಳಿಗೆ ಇವರು ಪಾತ್ರರಾಗಿದ್ದಾರೆ. ಜಾನಪದ ಸಂಶೋಧನೆ, ಗ್ರಂಥ ಸಂಪಾದನೆ, ವಿಶ್ಲೇಷಣೆ, ವಿಮರ್ಶೆ – ಈ ಕ್ಷೇತ್ರಗಳಲ್ಲಿ ಡಾ.ಪಿ.ಕೆ.ರಾಜಶೇಖರ ಅವರು ಕಳೆದ ನಲವತ್ತು ವರ್ಷಗಳಿಂದ ಅವಿರತ ದುಡಿಯುತ್ತಾ ಬಂದಿದ್ದಾರೆ. ಜನಪದ ಸಂಗೀತದ ಪ್ರಸಾರದಲ್ಲಂತು ಇವರದು ವಿಶಿಷ್ಟ ಸಾಧನೆಯಾಗಿದೆ. ವಿಶೇಷವಾಗಿ ಕನ್ನಡ ಜನಪದ ಮಹಾಕಾವ್ಯಗಳ ಸಂಪಾದನೆ–ಪ್ರಕಟಣೆಗಳಲ್ಲಿ ಇವರು ಅದ್ವಿತೀಯವಾದ ಕೆಲಸವನ್ನು ಮಾಡಿದ್ದಾರೆ. ಜನಪದ ಮಹಾಕಾವ್ಯವಿದೆ ಎಂಬುದನ್ನು ಕನ್ನಡ ಜಗತ್ತಿಗೆ ಮೊದಲಿಗೆ ತೋರಿಸಿ ಕೊಟ್ಟ ಹೆಗ್ಗಳಿಕೆ ಇವರದಾಗಿದೆ. ಇದರ ಜೊತೆಗೆ ಜನಪದ ಸಾಹಿತ್ಯದ ಇತರ ಪ್ರಕಾರಗಳಾದ ಖಂಡಕಾವ್ಯ, ಕಥನಕಾವ್ಯ, ಕಥೆ, ಗಾದೆ, ಒಗಟು, ಚಮತ್ಕಾರ, ಗಣಿತ ಇವುಗಳಿಗೆ ಸಂಬಂಧಿಸಿದ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ.

ಕನ್ನಡ ಜಾನಪದ ಕ್ಷೇತ್ರದಲ್ಲಿ ಶಾಸ್ತ್ರೀಯ ನೆಲೆಗಟ್ಟಿನ ಅಧ್ಯಯನಗಳು ಪ್ರಾರಂಭವಾಗುತ್ತಿದ್ದ ದಿನಗಳಲ್ಲಿ ಈ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಪಿ.ಕೆ.ರಾಜಶೇಖರ ಅವರು ಆಗಿನ್ನೂ ನಾಗರೀಕ ಪ್ರಭಾವಕ್ಕೆ ಒಳಗಾಗದೆ ತನ್ನ ಕನ್ನೆತನದ ಸೊನೆ ಬನಿಗಳಿಂದ ಮೈತುಂಬಿ ಮನಸೆಳೆಯುತ್ತಿದ್ದ. ಜನಪದ ಸಾಹಿತ್ಯ ಸಾಮಗ್ರಿಯನ್ನು ಆರಂಭದಲ್ಲಿಯೇ ಆಸಕ್ತಿಯಿಂದ

ಸಂಗ್ರಹಿಸಿದರು. ಕ್ಷೇತ್ರಕಾರ್ಯದ ಬಗ್ಗೆ ಅಪಾರ ಆಸಕ್ತಿಯನ್ನಿರಿಸಿಕೊಂಡಿದ್ದ ಇವರು ಬೆಂಕಿ ಬಿದ್ದ ಮನೆಯೊಳಗಿನಿಂದ ಅಮೂಲ್ಯವಾದ ವಸ್ತುವಿಶೇಷಗಳನ್ನೆಲ್ಲಾ ಮೈಬೇಯುವ ಕೈ ಸೀಯುವ ಅಪಾಯವನ್ನೂ ಲಕ್ಷಿಸದೆ ಹೊರತಂದು ರಕ್ಷಿಸುವಂತೆ, ಕನ್ನಡದ ಅಮೂಲ್ಯ ಜನಪದ ಕಾವ್ಯಗಳನ್ನು ಬಲು ಜಾಗರೂಕತೆಯಿಂದ ಸಂಗ್ರಹಿಸಿದ್ದು ಕನ್ನಡನಾಡಿನ ಪುಣ್ಯವೇ ಆಗಿದೆ. ತಾವು ಕಾಲಿರಿಸಿದ ಕ್ಷೇತ್ರದಲ್ಲಿನ ಅಗ್ನಿಪರೀಕ್ಷೆಗಳನ್ನು ಗೆದ್ದು, ಪುಟಕಿಟ್ಟ ಬಂಗಾರದಂತಹ ಅನನ್ಯ ಕಾಂತಿಯ ಕೃತಿಗಳನ್ನು ಇವರು ಕನ್ನಡಿಗರ ಅವಗಾಹನೆಗೆ ಒಪ್ಪಿಸಿದ್ದಾರೆ.

ಬಾಲ್ಯ ವಿದ್ಯಾಭ್ಯಾಸ: ಡಾ.ಪಿ.ಕೆ.ರಾಜಶೇಖರ ಅವರು ಮೈಸೂರು ಜಿಲ್ಲೆ ಗಡಿಭಾಗದ ತಾಲ್ಲೂಕಾದ ಪಿರಿಯಾಪಟ್ಟಣದಲ್ಲಿ ಶ್ರೀ ಪಿ.ಡಿ.ಕೆಂಪೇಗೌಡ ಮತ್ತು ಶ್ರೀಮತಿ ಪುಟ್ಟಮ್ಮ ದಂಪತಿಗಳ ಸುಪುತ್ರರಾಗಿ ದಿನಾಂಕ: ೧೩.೧೦.೧೯೪೬ರಲ್ಲಿ ಜನಿಸಿದರು. 'ಗುಂಪು ಒಂದು ತಂಪು' ಎಂಬ ಜನಪದರ ತತ್ವದ ಸಾಕಾರದಂತಿದ್ದ ತುಂಬು ಕುಟುಂಬದಲ್ಲಿ ಬೆಳೆದ ರಾಜಶೇಖರ ಅವರು ಶೈಶವ, ಬಾಲ್ಯದಲ್ಲಿಯೆ ಜಾನಪದಕ್ಕೆ ಮುಖಾಮುಖಿಯಾದರು. ಅಂದರೆ ಇವರು ಬಾಲ್ಯದಲ್ಲಿಯೆ ಜಾನಪದದ ವಿಶೇಷ ಆಕರ್ಷಣೆಗೆ ಒಳಗಾದರು. ಇವರ ತಂದೆಯವರಾದ ಕೆಂಪೇಗೌಡರು ಜನಪದ ವೈದ್ಯರಾಗಿದ್ದುದಲ್ಲದೆ, ರಾಮಾಯಣ, ಮಹಾಭಾರತಗಳನ್ನು ಕರತಲಾಮಲಕ ಮಾಡಿಕೊಂಡಿದ್ದರು. ಜೊತೆಗೆ ಲಕ್ಷ್ಮೀಶನ ಜೈಮಿನಿಭಾರತ, ದೇವಿಮಹಾತ್ಮೆಯಂಥ ಕೃತಿಗಳು ಇವರಿಗೆ ತಿಳಿದಿದ್ದವು. ಹಾಗಾಗಿ ಪಿ.ಕೆ.ರಾಜಶೇಖರ ಅವರಿಗೆ ಬಾಲ್ಯದಲ್ಲಿಯೇ ತಂದೆಯ ಮುಖೇನ ಸಾಹಿತ್ಯ ಮತ್ತು ಜಾನಪದದ ಪ್ರಾಥಮಿಕ ಸಂಸ್ಕಾರ ದೊರೆಯಿತು. ಇದರ ಜೊತೆಗೆ ತಾಯಿ ಪುಟ್ಟಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಅಜ್ಜಿ ಹುಣಸೆಕುಪ್ಪೆ ಸಣ್ಣಮ್ಮನವರು ಹಾಡುತ್ತಿದ್ದ ಜನಪದ ತ್ರಿಪದಿಗಳಿಂದಲೂ ಇವರು ಪ್ರಭಾವಿತರಾದರು.

ಡಾ.ಪಿ.ಕೆ.ರಾಜಶೇಖರ ಅವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಹುಟ್ಟೂರಾದ ಪಿರಿಯಾಪಟ್ಟಣದಲ್ಲಿ ಪೂರ್ಣಗೊಳಿಸಿದರು.

ವಿದ್ಯಾರ್ಥಿ ದಿಸೆಯಲ್ಲಿಯೆ ಇವರು ತಮ್ಮನ್ನು ಗಾಯಕನಾಗಿ ಗುರುತಿಸಿಕೊಂಡಿದ್ದರು. ಇವರಿಗೆ ಪಾಠ ಹೇಳಿದ ಗುರುಗಳಾದ ಅಣ್ಣಯ್ಯ, ಕೊಡಗಿನ ಕಾಳಪ್ಪ, ಎಸ್.ಟಿ.ದಕ್ಷಿಣಾಮೂರ್ತಿ, ಶಿವನಂಜೇದೇವರು ಮುಂತಾದವರು ಪಿ.ಕೆ.ರಾಜಶೇಖರ ಅವರ ವಿದ್ಯಾಪ್ರೇಮಕ್ಕೆ ಪ್ರೋಜ್ವಲ ಪ್ರೋತ್ಸಾಹ ನೀಡಿದ್ದಲ್ಲದೆ, ಇವರ ಗಾಯಕ ಗುಣವನ್ನು ಉತ್ತೇಜಿಸಿದರು. ಇದು ಮುಂದೆ ರಾಜಶೇಖರ ಅವರು ಸಾಹಿತ್ಯ ಮತ್ತು ಜಾನಪದ ಕ್ಷೇತ್ರದಲ್ಲಿ ವಿಶಿಷ್ಟವಾದುದನ್ನು ಸಾಧಿಸಲು ಬದ್ರ ಬುನಾದಿ ಹಾಕಿಕೊಟ್ಟಿತು; ಜನಪದ ಗಾಯಕನಾಗಿ ಗುರುತಿಸಿಕೊಳ್ಳಲು ಗುರುತರ ಮಾರ್ಗದರ್ಶನ ನೀಡಿತು.

ಮುಂದೆ ಪಿ.ಕೆ.ರಾಜಶೇಖರ ಅವರು ಉನ್ನತ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದರು. ಆಗೆಲ್ಲ ಉನ್ನತ ಶಿಕ್ಷಣಾಕಾಂಕ್ಷಿಗಳ ಮಹಾ ಆಕರ್ಷಣೆಯ ಕೇಂದ್ರವಾಗಿದ್ದುದು ಮೈಸೂರಿನ ಹೆಮ್ಮೆಯ ಮಹಾರಾಜ ಕಾಲೇಜು. ತಮ್ಮ ಭಾವನವರಾದ ಪ್ರೊ.ಕೆ.ಟಿ.ಶಿವರುದ್ರಪ್ಪನವರ ಆಶ್ರಯದಲ್ಲಿದ್ದುಕೊಂಡು ಬೆಂಗಳೂರಿನ ಬಸವನಗುಡಿಯಲ್ಲಿದ್ದ ವಿಜಯಾ ಕಾಲೇಜಿನಲ್ಲಿ ಪಿ.ಯು.ಸಿ.ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ತರುವಾಯ ರಾಜಶೇಖರ ಅವರು ಬಿ.ಎ. ಶಿಕ್ಷಣಕ್ಕಾಗಿ ಮಹಾರಾಜ ಕಾಲೇಜಿಗೆ ಪ್ರವೇಶ ಪಡೆದರು. ಕನ್ನಡ ಸಾಹಿತ್ಯವನ್ನು ಪ್ರಧಾನ ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದ ಇವರಿಗೆ ಅಲ್ಲಿ ಗುರು–ದಿಗ್ಗಜರಿಂದ ಪಾಠ ಕೇಳುವ ಸದವಕಾಶ ದೊರಕಿತು. ಪ್ರೊ.ಸುಜನಾ, ಡಾ.ಸಿ.ಪಿ.ಕೆ, ಪ್ರೊ.ಜಿ.ವರದರಾಜರಾವ್, ಪ್ರೊ.ಜಿ.ಎಸ್.ಶಿವರುದ್ರಪ್ಪ, ಡಾ.ಪ್ರಭುಶಂಕರ, ಡಾ.ರಾಗೌ, ಪ್ರೊ.ಎಚ್.ಎಂ.ಚೆನ್ನಯ್ಯ, ಪ್ರೊ.ಕರಿಮುದ್ದೀನ್ ಮುಂತಾದ ಕವಿ–ವಿದ್ವಾಂಸ–ವಿಮರ್ಶಕ ಗುರುಗಳಿಂದ ಹೆಚ್ಚಿನದನ್ನು ಕಲಿಯಲು ಮತ್ತು ಸಾಹಿತ್ಯಾಧ್ಯಯನದಲ್ಲಿ ಗಂಭೀರ ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಜೊತೆಗೆ ಮಂದೆ ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ ಆಲನಹಳ್ಳಿ ಶ್ರೀ ಕೃಷ್ಣ, ಡಾ.ಕಾಳೇಗೌಡ ನಾಗವಾರ, ಪ್ರೊ.ಕೆ.ರಾಮದಾಸ್, ಡಾ.ತೀ.ನಂ.ಶಂಕರನಾರಾಯಣ ಮುಂತಾದವರು ಸಹಪಾಠಿಗಳಾಗಿ ದೊರೆತದ್ದರಿಂದ ಅವರ ಒಡನಾಟದ

ಪ್ರಯೋಜನವೂ ರಾಜಶೇಖರ ಅವರಿಗೆ ದಕ್ಕಿತು. ಮೂಲತಃ ಸಂಕೋಚ ಸ್ವಭಾವದವರಾದ ಪಿ.ಕೆ.ರಾಜಶೇಖರ ಅವರು ಬಿ.ಎ. ಪದವಿ, ಅಧ್ಯಯನದ ದಿನಗಳಲ್ಲಿ ಮಹಾರಾಜ ಕಾಲೇಜಿನ ವೇದಿಕೆಗಳಲ್ಲಿ 'ಮಿಂಚದಿದ್ದರೂ' ಗೌರವತಪಸ್ವಿಯಂತೆ ವ್ಯಾಸಂಗದಲ್ಲಿ ತಲ್ಲೀನತೆ ತೋರಿ ಜ್ಞಾನಾರ್ಜನೆಯಲ್ಲಿ ತುಂಬು ಆಸಕ್ತಿಯಿಂದ ಮುನ್ನಡೆದರು.

ಬಿ.ಎ. ಪದವಿಯನ್ನು ಪಡೆದ ಅನಂತರ ಇವರು ಸ್ವಲ್ಪ ಕಾಲ ಹಾಸನದ ಸಂತ ಜೋಸೆಫರ ಪ್ರೌಢಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಪಾಠ ಹೇಳುವ, ಹಾಡು ಕಲಿಸುವ, ನಾಟಕ ನಿರ್ದೇಶನ ಮಾಡುವ, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ವಿಶೇಷ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆ ಶಾಲೆಗೆ ಒಂದು ಸಾಂಸ್ಕೃತಿಕ ಮೆರಗನ್ನಿತ್ತುದಲ್ಲದೆ ಹಲವು ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸಿದರು. ಇಂದು ಜಾನಪದ ವಿದ್ವಾಂಸರಾಗಿ, ಕಥೆಗಾರನಾಗಿ, ಕಾದಂಬರಿಕಾರನಾಗಿ, ಕವಿ–ಮಹಾಕವಿಯಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಡಾ.ಬಿ.ಎಸ್. ತಲ್ವಾಡಿಯವರು ಆ ಶಾಲೆಯ ವಿದ್ಯಾರ್ಥಿಯಾಗಿ ಪಿ.ಕೆ.ಆರ್.ಅವರ ಪ್ರಭಾವಲಯದಲ್ಲಿ ಬೆಳೆದವರು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಹಾಗೊಂದು ವೇಳೆ ಪಿ.ಕೆ.ರಾಜಶೇಖರ ಅವರು ಆ ಶಾಲೆಯಲ್ಲಿಯೇ ಉಪಾಧ್ಯಾಯರಾಗಿ ಮುಂದುವರಿದಿದ್ದರೆ ಕನ್ನಡ ಜಾನಪದ ಲೋಕ ಅಪಾರವಾದುದನ್ನು ಖಂಡಿತ ಕಳೆದುಕೊಳ್ಳುತ್ತಿತ್ತು.

ಪಿ.ಕೆ.ರಾಜಶೇಖರರ ಸಾಹಿತ್ಯಾಸಕ್ತಿಯನ್ನು ಮೊದಲಿನಿಂದಲೂ ಗಮನಿಸುತ್ತಾ ಬಂದಿದ್ದ ಹಾಗೂ ಇವರ ಬಗ್ಗೆ ಮುಂಗಾಣ್ಕೆಯನ್ನು ಹೊಂದಿದ್ದ ಇವರ ಭಾವನವರಾದ ಪ್ರೊ.ಕೆ.ಬಿ.ಶಿವರುದ್ರಪ್ಪನವರು ಪಿ.ಕೆ. ಆರ್.ಅವರನ್ನು ಮತ್ತೆ ಮೈಸೂರಿಗೆ ಕರೆತಂದು ಕನ್ನಡ ಎಂ.ಎ ಅಧ್ಯಯನಕ್ಕೆ ಪ್ರವೇಶ ಕೊಡಿಸಿದ್ದಲ್ಲದೆ, ಮೈಸೂರಿನ ವಿದ್ಯಾರ್ಥಿನಿಲಯವೊಂದರಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆಯನ್ನೂ ಕಲ್ಪಿಸಿಕೊಟ್ಟರು. ಪ್ರೊ.ಶಿವರುದ್ರಪ್ಪನವರ ಸಮಯೋಚಿತ ನಿರ್ಧಾರ ಮತ್ತು ಕ್ರಮದಿಂದ ಪಿ.ಕೆ.ಆರ್. ಕನ್ನಡ

ಜಾನಪದಕ್ಕೆ ಪ್ರಾಪ್ತವಾದರು. (ಹೀಗೆ ವೈಯಕ್ತಿಕವಾಗಿ ತಮಗೆ ಮತ್ತು ಪರೋಕ್ಷವಾಗಿ ಕನ್ನಡ ಜಾನಪದ ಲೋಕಕ್ಕೆ ಮಹದುಪಕಾರವನ್ನು ಮಾಡಿಕೊಟ್ಟ ಪ್ರೊ.ಶಿವರುದ್ರಪ್ಪನವರಿಗೆ 'ಮಣ್ಣಿನ ಹಣತೆ' ಎಂಬ ಸಾರ್ಥಕ ಉದ್ಗ್ರಂಥವನ್ನು ಸಂಸ್ಮರಣಾ ಮಹಾ ಹೊತ್ತಗೆಯಾಗಿ ಅರ್ಪಿಸುವ ಮೂಲಕ ಆ ದಿಗ್ದರ್ಶಕ ಶಕ್ತಿಗೆ ಕನ್ನಡಿಗರ ಪರವಾಗಿ ಪಿ.ಕೆ. ರಾಜಶೇಖರ ಅವರು ಉನ್ನತ ಗೌರವವನ್ನು ಸಲ್ಲಿಸಿದ್ದಾರೆ.)

ಎಂ.ಎ.ಪದವಿ ಅಧ್ಯಯನಕ್ಕೆ ಪ್ರವೇಶ ಪಡೆದ ರಾಜಶೇಖರ ಅವರು ತಮ್ಮ ಅಭಿಮಾನದ ಪೂಜ್ಯ ಗುರುಗಳಾದ ಜಾನಪದ ದಿಗ್ಗಜ ಡಾ.ರಾಗೌ ಅವರ ಸಲಹೆಯಂತೆ ಜಾನಪದವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಎರಡು ವರ್ಷಗಳ ತಮ್ಮ ಸ್ನಾತಕೋತ್ತರ ಅಧ್ಯಯನವನ್ನು ಸಾರ್ಥಕವಾಗಿ ಪೂರ್ಣಗೊಳಿಸಿದರು. ತಮ್ಮ ಅಧ್ಯಯನಾಸಕ್ತಿಗೆ ತಕ್ಕಂತೆ ಪಿ.ಕೆ.ಆರ್.ಜಾನಪದ ವಿಷಯದಲ್ಲಿ ಸ್ವರ್ಣ ಪದಕವನ್ನು ಗಳಿಸಿದರು. ಮುಂದೆ ಪ್ರೊ.ಕೆ.ಬಿ.ಶಿವರುದ್ರಪ್ಪನವರ ಸೂಚನೆಯಂತೆ ಪಿ.ಎಚ್.ಡಿ.ಪದವಿಗಾಗಿ ಸಂಶೋಧನೆಗೆ ತೊಡಗಿದರು. ಡಾ.ಸಿ.ಪಿ.ಕೆ. ಅವರ ಮಾರ್ಗದರ್ಶನದಲ್ಲಿ 'ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು' ಎಂಬ ವಿಷಯವನ್ನು ಕುರಿತಂತೆ ಸಂಶೋಧನೆ ನಡೆಸಿ ೧೯೮೧ರಲ್ಲಿ ಪಿಎಚ್.ಡಿ.ಪದವಿಯನ್ನು ಗಳಿಸಿದರು.

ಜಾನಪದ ಸಂಶೋಧನೆಯ ಜಾಡಿನಲ್ಲಿ: ಪಿ.ಕೆ.ರಾಜಶೇಖರ ಅವರು ಒಂದು ನಿರ್ದಿಷ್ಟ ವಿಷಯವನ್ನಾಯ್ದುಕೊಂಡು ಸಂಶೋಧನೆಯನ್ನು ಆರಂಭಿಸಿದರೂ ಅದು ಕೇವಲ ಪದವಿನಿಷ್ಠ ಸಂಶೋಧನೆಯಾಗಿ ಉಳಿಯಲಿಲ್ಲ. ಬದಲಾಗಿ ಒಟ್ಟು ಜಾನಪದ ಸಂಶೋಧನೆಯಾಗಿ ಬೆಳೆಯಿತು. ಇವರ ಪಿಎಚ್.ಡಿ.ನಿಬಂಧ (Thesis) ಪೂರ್ಣಗೊಳಿಸುವ ಮೊದಲೇ ಕೆಲವು ಮಹತ್ವದ ಕೃತಿಗಳನ್ನು ಇವರು ಪ್ರಕಟಪಡಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ. ಜಾನಪದ ಸಂಶೋಧನೆಯನ್ನು ಕೇವಲ ಯಾಂತ್ರಿಕವಾಗಿ ತೆಗೆದುಕೊಳ್ಳದೆ, ಅದನ್ನು ತಮ್ಮ ಜೀವನದ ಒಂದು ವಿಧಾನವಾಗಿ ಸ್ವೀಕರಿಸಿದ್ದು. ಪಿ.ಕೆ.ರಾಜಶೇಖರ ಅವರ ವಿಶೇಷವಾಗಿದೆ.

'ದಕ್ಷಿಣ ಕರ್ನಾಟಕದ ಜನಪದ ಪುರಾಣ'ಗಳಿಗೆ ಸಂಬಂಧಿಸಿದಂತೆ ಅಧ್ಯಯನವನ್ನು ಕೈಗೊಂಡ ಇವರು ಇದಕ್ಕೆ ಪೂರಕವಾಗಿ ಜನಪದ ಕಾವ್ಯ-ಮಹಾಕಾವ್ಯಗಳ ಶೋಧನೆಗೂ ತೊಡಗಿದರು. ಇದರ ಫಲವಾಗಿ ೧೯೭೨ರಲ್ಲಿ ಜನಪದ ಪ್ರಣಯ ಕಾವ್ಯ 'ಬೆಟ್ಟದ ಚಾಮುಂಡಿ'ಯನ್ನು ಪ್ರಕಟಗೊಳಿಸಿದರು. ಇದು ಇವರ ಪ್ರಥಮ ಜಾನಪದ ಪ್ರಕಟಣೆಯೂ ಆಗಿದೆ. ದೇವರಗುಡ್ಡರ ಸಂಪ್ರದಾಯಕ್ಕೆ ಸೇರಿದ ಸುಮಾರು ಎಂಭತ್ತು ಪುಟಗಳ ಈ ಕಾವ್ಯ ಒಟ್ಟು ಹತ್ತು ಶೀರ್ಷಿಕೆಗಳಲ್ಲಿ ಅಚ್ಚುಕಟ್ಟಾಗಿ ಅಡಕಗೊಂಡಿದೆ. ಸಂಪಾದಕರ ಸುದೀರ್ಘ ಪ್ರಸ್ತಾವನೆ ಹಾಗೂ ರಾಗೌ ಅವರ ವಿದ್ವತ್ಪೂರ್ಣ ಮುನ್ನುಡಿಗಳಿಂದ ಈ ಕಾವ್ಯ ಶಾಸ್ತ್ರೀಯ ಸಂಶೋಧನಾ ಸಂಪನ್ನತೆಯನ್ನು ಪಡೆದುಕೊಂಡಿದೆ. ಈ ಕಾವ್ಯವನ್ನು ಹಾಡಿದ ಜನಪದ ಗಾಯಕ ಕ್ಯಾತಮಾರನಹಳ್ಳಿ ಮಹದೇವಯ್ಯನ ಪರಿಚಯವನ್ನು ಒಳಗೊಂಡಿದ್ದ ಈ ಕಾವ್ಯಕೃತಿಯಲ್ಲಿ ಸಂಗೀತ ವಿದ್ವಾನ್ ಶ್ರೀ ಎಸ್.ವಿ.ರಮಣ ಕುಮಾರ್ ಅವರು ಹಾಕಿಕೊಟ್ಟ ಆ ಕಾವ್ಯದ ಮಟ್ಟಿನ ಸ್ವರ ಪ್ರಸ್ತಾರವೂ ಸೇರ್ಪಡೆಯಾಗಿರುವುದು ಒಂದು ವಿಶೇಷವಾಗಿದೆ. ಕಾವ್ಯದ ಕೇವಲ ಸಾಹಿತ್ಯ ಸಾಮಗ್ರಿಯನ್ನಲ್ಲದೆ ಅದರ ಸಂಗೀತ ಗುಣವನ್ನೂ ಸಹೃದಯರಿಗೆ ಸಲ್ಲಿಸುವ ಸಾತ್ವಿಕ ಪ್ರಯತ್ನ ಇಲ್ಲಿದೆ.

ಕನ್ನಡ ಜನಪದ ಸಾಹಿತ್ಯದಲ್ಲಿಯೂ 'ಮಹಾಕಾವ್ಯ' ಇದೆ ಎಂಬುದನ್ನು ಮೊದಲಿಗೆ ತೋರಿಸಿಕೊಟ್ಟ ವಿಶೇಷ ಕೀರ್ತಿ ಪಿ.ಕೆ.ರಾಜಶೇಖರ ಅವರಿಗೆ ಸಲ್ಲುತ್ತದೆ. ಅವರು ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗಲೇ 'ಕನ್ನಡ ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ' ಮಹಾಕೃತಿಯನ್ನು ಪ್ರಕಟಿಸಿದರು (೧೯೭೩). ಅದುವರೆಗೂ ಫಿನ್ಲೆಂಡಿನ ಜನಪದ ಮಹಾಕಾವ್ಯ 'ಕಲೇವಾಲ'ವನ್ನೇ ಅತ್ಯಂತ ದೊಡ್ಡಕಾವ್ಯ ಎಂದು ತಿಳಿದಿದ್ದ ಜಗತ್ತಿಗೆ ಪ್ರಥಮಬಾರಿಗೆ ಕನ್ನಡದಲ್ಲಿ ಕಲೇವಾಲಕ್ಕಿಂತ ಮೂರುಪಟ್ಟು ದೊಡ್ಡದಾದ ಜನಪದ ಮಹಕಾವ್ಯವಿದೆ ಎಂಬುದನ್ನು ಪಿ.ಕೆ.ರಾಜಶೇಖರ ಅವರು ತೋರಿಸಕೊಟ್ಟರು. ಆ ಮೂಲಕ ವಿಶ್ವ ಜಾನಪದದ ಸಂದರ್ಭದಲ್ಲಿ ಕನ್ನಡ ಘನತೆ-ಅನನ್ಯತೆಯನ್ನು ಸ್ಥಾಪಿಸಿ ರಾಜಶೇಖರ ಅವರು ಒಂದು

ವಿಶ್ವದಾಖಲೆಯನ್ನೇ ಮಾಡಿದ್ದಾರೆ. ಹತ್ತಾರು ಗಾಯಕರಿಂದ ಸಂಗ್ರಹಿಸಿ ಎರಡು ಸಂಪುಟಗಳಲ್ಲಿ ಒಟ್ಟು ಒಂದು ಸಾವಿರದ ಎಪ್ಪತ್ನಾಲ್ಕು ಪುಟಗಳ ಈ ಬೃಹತ್ ಕಾವ್ಯ ಕನ್ನಡದ ಒಂದು ವಿಸ್ಮಯವೆನಿಸಿದ್ದು ವಿದ್ವಾಂಸರ ಅರ್ಹ ಪ್ರಶಂಸೆಗೆ ಪಾತ್ರವಾಗಿದೆ. "ಸಮರ್ಪಕ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ ಸಂಪಾದಿತವಾಗಿರುವ ಇದು ಜಾನಪದ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ"(ಡಾ.ಹಾ.ಮಾ.ನಾಯಕ), 'ಮಲೆಯ ಮಾದೇಶ್ವರ ಒಂದು ಅಪೂರ್ವವೂ ರಸಮೌಲ್ಯಪೂರಿತವೂ, ಕುತೂಹಲಜನಕವೂ ಆದ ಪ್ರಕಟಣೆ ಎಂಬುದು ನಿಸ್ಸಂದೇಹ' (ಡಾ. ಎಸ್.ವಿ.ರಂಗಣ್ಣ), 'ಈ ಜಾನಪದ ಮಹಾಕಾವ್ಯ ನಿಜಕ್ಕೂ ಒಂದು ವಿಸ್ಮಯವಾಗಿದೆ. ಇದು ಗಣ್ಯವಾದ ಅಭಿನಂದನೀಯವಾದ ಸಾಧನೆ ಮಾತ್ರವಲ್ಲದೆ ಈ ದಿಶೆಯಲ್ಲಿ ಕೆಲಸ ಮಾಡಬಯಸುವವರಿಗೊಂದು ದಾರಿದೀಪವೂ ಹೌದು' (ಡಾ.ಸಿ.ಪಿ.ಕೆ.), 'ಇದುವರೆಗಿನ ಪ್ರಕಟಿತ ಜಾನಪದ ಕೃತಿಗಳಲ್ಲಿ ಇದು ಆಚಾರ್ಯ ಕೃತಿಯಾಗಿದೆ. ಕನ್ನಡ ಜಾನಪದ ವಿದ್ವತ್ತನ್ನು ಸ್ಮಾರಕಗೊಳಿಸಿದ ಇದು, ಆ ದಿಶೆಯಲ್ಲಿ ಹೊಸ ದಿಗಂತವನ್ನೇ ತೆರೆದಿದೆ' (ಡಾ.ರಾಗೌ), 'ಮಲೆಯ ಮಾದೇಶ್ವರ' ನಮ್ಮ ಜನಪದ ಸಾಹಿತ್ಯ ಸೌಧದ ಒಂದು ಹೆಗ್ಗಂಬ' (ಡಾ.ಮಳಲಿ ವಸಂತಕುಮಾರ್) – ಇತ್ಯಾದಿ ವಿಮರ್ಶಾ ನುಡಿಗಳು ಈ ಮಹಾಕಾವ್ಯದ ಮಹೋನ್ನತಿಯನ್ನು ಸಾರುತ್ತವೆ. ಇಂಥ ಅಭಿಪ್ರಾಯಗಳಿಗೆ ತಕ್ಕಂತೆ ಈ ಕೃತಿ ಪ್ರಕಟಗೊಂಡಂದಿನಿಂದ ಇಂದಿನವರೆಗೂ ಹಲವು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚರ್ಚೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಾ ಬಂದಿದೆ. ಅಷ್ಟೇ ಅಲ್ಲ ಹಲವು ಸೃಜನಶೀಲ ಕೃತಿಗಳ ರಚನೆಗೆ ಪ್ರೇರಣೆ ನೀಡಿಯೂ ತನ್ನ ಘನತೆಯನ್ನು ಸಾದರಪಡಿಸಿದೆ. ದೇಸಿ ಚಿಂತನೆ–ಚರ್ಚೆಗಳು ಮುಖ್ಯವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಕೃತಿ ಮರುಚಿಂತನೆಗೆ ಒಳಗಾಗುತ್ತಿರುವುದು ವಿಶೇಷ.

ಈ ಮಹಾಕಾವ್ಯದ ಪ್ರಕಟಣೆ ಪಿ.ಕೆ.ರಾಜಶೇಖರ ಅವರಿಗೆ ವಿಶಿಷ್ಟ ಕೀರ್ತಿಯನ್ನು ತಂದುದ್ದಲ್ಲದೆ ಕೆಲವು ವಿಚಿತ್ರ ಸಂಕಷ್ಟಗಳಿಗೆ ಅವರನ್ನು ಈಡು ಮಾಡಿದ್ದೂ ದಿಟ. ಸಂಶೋಧನಾ ವಿದ್ಯಾರ್ಥಿಯಾಗಿದ್ದ ಕಿರಿಯನೊಬ್ಬ

ವಿಶ್ವದಾಖಲೆಯಾಗುವಂಥ ಮಹಾಕಾವ್ಯವನ್ನು ಪ್ರಕಟಪಡಿಸಿದ್ದು ಕೆಲವರಿಗೆ ಸಹಿಸಿಕೊಳ್ಳಲಾರದಷ್ಟು ಅಸಹನೆ, ಅಸಮಾಧಾನವನ್ನುಂಟು ಮಾಡಿತು. ಇದು ಯಾವ ಹಂತಕ್ಕೆ ಹೋಯಿತೆಂದರೆ, 'ಮಲೆಯ ಮಾದೇಶ್ವರ' ಪುಸ್ತಕವನ್ನು ಬ್ಯಾನ್ ಮಾಡಬೇಕು, ಇದು ಯಾವ ತರಗತಿಗೂ ಪಠ್ಯವಾಗಿ ನೇಮಕವಾಗಕೂಡದು ಎಂಬ ಹುಕುಮನ್ನು ಕೆಲವರು ಹೊರಡಿಸಿದರು. ಕೃತಿಯುಕ್ತ ಆಧಾರಗಳನ್ನಾಶ್ರಯಿಸಿ ಮಾದೇಶ್ವರರ ಜಾತಿಯನ್ನು ಕುರಿತಂತೆ ಪಿ.ಕೆ.ಆರ್.ಬರೆದಿದ್ದ ವಿಚಾರಗಳನ್ನು ವಿರೋಧಿಸಿ ಅವರಿಗೆ ಲಾಯರ್ ನೋಟೀಸ್ ಕೂಡ ನೀಡಲಾಯಿತು. ಸಾಹಿತ್ಯ ಲೋಕದಲ್ಲಿ ಇನ್ನೂ ಭದ್ರವಾಗಿ ನೆಲೆಯೂರಿರದ, ಒಂದು ಗಂಭೀರ ಸವಾಲನ್ನು ಸಮರ್ಥವಾಗಿ ಎದುರಿಸಬಲ್ಲ ಜೀವನಾನುಭವವಿಲ್ಲದ, ಆರ್ಥಿಕವಾಗಿಯೂ ಬಲ ಹೊಂದಿರದ ಸನ್ನಿವೇಶದಲ್ಲಿ ಇಂಥದ್ದೊಂದು ಸಂಕಷ್ಟ ಎದುರಾದದ್ದು ಖಂಡಿತ ಪಿ.ಕೆ.ಆರ್.ಅವರಿಗೆ ದಿಗಿಲುಂಟು ಮಾಡಿತು. ಆ ಸಂದರ್ಭವನ್ನು ಅವರು ಎದುರಿಸಿದ್ದೇ ಒಂದು ಸಾಹಸಗಾಥೆಯಾಗಿದೆ. ಆದರೆ ಈ ಎಲ್ಲಾ ಸವಾಲುಗಳನ್ನು ಅವರು ಸಮರ್ಥವಾಗಿ ಎದುರಿಸಿ ಯಶಸ್ವಿಯಾದರು. ಇದರಿಂದ ಅವರು ಉತ್ಸಾಹಹೀನರಾಗಲಿಲ್ಲ. ಜಾನಪದ ಕ್ಷೇತ್ರಕಾರ್ಯ, ಸಂಶೋಧನೆ, ಪ್ರಕಟಣೆಗಳಲ್ಲಿ ಇನ್ನಷ್ಟು ಗಟ್ಟಿಯಾದರು.

ಪಿ.ಕೆ.ರಾಜಶೇಖರ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡು ೧೯೭೪ರಿಂದ ೧೯೯೯ರವರೆಗೆ ಮಹಾರಾಜ ಕಾಲೇಜು, ಯುವರಾಜ ಕಾಲೇಜು ಹಾಗೂ ಲಲಿತ ಕಲೆಗಳ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನಂತರ ೧೯೯೯ ರಿಂದ ೨೦೦೬ರವರೆಗೆ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಇವರು ನಿಗದಿತ ಪಠ್ಯಬೋಧನೆಯ ಜೊತೆಗೆ ಅನೇಕ ವಿದ್ಯಾರ್ಥಿಗಳಲ್ಲಿ ಜಾನಪದವನ್ನು ಕುರಿತಾದ ಅಭಿಮಾನ-ಆಸಕ್ತಿಗಳನ್ನು ಮೂಡಿಸಿದರು. ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕಾವ್ಯ-

ಕಾವ್ಯಭಾಗಗಳನ್ನು ಪಾಠ ಹೇಳುವ ಸಂದರ್ಭಗಳಲ್ಲಿ ತೌಲನಿಕ ಬಗೆಯಲ್ಲಿ ಪಠ್ಯಕ್ಕೆ ಪೂರಕವಾದ ಜನಪದ ಕಾವ್ಯಭಾಗಗಳನ್ನು ಪರಿಚಯಿಸುತ್ತಾ ತನ್ಮೂಲಕ ಕನ್ನಡ ದೇಸಿ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾ ಬಂದದ್ದು ವಿಶೇಷ ಸಂಗತಿಯಾಗಿದೆ. ಇದರ ಜೊತೆಗೆ ಗ್ರಾಮೀಣ ಪರಿಸರದಿಂದ ಬಂದ ವಿದ್ಯಾರ್ಥಿಗಳಿಗೆ ಅವರ ಪರಿಸರದ ಜನಪದ ಸಾಮಗ್ರಿಯನ್ನು ಸಂಗ್ರಹಿಸುವ ವಿಶ್ಲೇಷಿಸುವ ಕಾರ್ಯವನ್ನು ಹಚ್ಚಿ ಅನೇಕರಿಗೆ ಪರೋಕ್ಷವಾಗಿ ಜಾನಪದ ದೀಕ್ಷೆಯನ್ನು ನೀಡಿ ಜಾನಪದ ಸಂಶೋಧನೆಯ ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಮಹಾಕಾವ್ಯಗಳ ಸಂಪಾದಕ: ಅಧ್ಯಾಪನ ಕಾಯಕದಲ್ಲಿ ತಮ್ಮನ್ನು ತಲ್ಲೀನತೆಯಿಂದ ತೊಡಗಿಸಿಕೊಂಡರೂ ಪಿ.ಕೆ.ಆರ್.ಜಾನಪದ ಸಂಶೋಧನೆಯನ್ನು ಕೈಬಿಡಲಿಲ್ಲ. ಆ ಮಹಾಯಾನದಲ್ಲಿ ಅವರು ನಿರಂತರವಾಗಿ ಮುನ್ನಡೆಯುತ್ತಲೇ ಬಂದರು. ಪಿ.ಕೆ.ಆರ್.ಅವರಿಗೆ ಮೊದಲಿನಿಂದಲೂ ಮಹಾಕಾವ್ಯಗಳ ಸಂಪಾದನೆ–ಪ್ರಕಟಣೆಗಳಲ್ಲಿ ತುಂಬಾ ಆಸಕ್ತಿ. ಹಾಗಾಗಿ ಅವರು 'ಮಲೆಯ ಮಾದೇಶ್ವರ' ಮಹಾಕಾವ್ಯವನ್ನು ಪ್ರಕಟಿಸಿ ವಿರಮಿಸಲಿಲ್ಲ. ಇಂಥ ಅವಿರತ ಪ್ರಯತ್ನಗಳಿಂದಾಗಿ 'ಜನಪದ ವೀರಕಾವ್ಯ', 'ಪಿರಿಯಾಪಟ್ಟಣದ ಕಾಳಗ', 'ಜನಪದ ರಾಮಾಯಣ', ಮಾಗಡಿ ಕೆಂಪೇಗೌಡ', 'ಜನಪದ ಬಸವ ಪುರಾಣ', 'ಕರಪಾಲ ಬಸವಪುರಾಣ', 'ಜನಪದ ಮಹಾಭಾರತ', 'ಪಾರ್ಥನ ಜೋಗಿ ಹಾಡು', ಇತ್ಯಾದಿ ಶ್ರೇಷ್ಠ ಜನಪದ ಕಾವ್ಯಗಳು ಕನ್ನಡಿಗರ ಕೈಸೇರುವಂತಾಯಿತು. ಮೇಲೆ ಉಲ್ಲೇಖಿಸಿರುವ ಕೃತಿಗಳು ಕನ್ನಡ ಜನಪದ ಕಾವ್ಯಗಳ ಸಂದರ್ಭದಲ್ಲಿ ಬಹುಮುಖ್ಯವಾದ ಚರ್ಚೆಗಳಿಗೆ ಸಾಂಸ್ಕೃತಿಕ ವಾಗ್ವಾದಗಳಿಗೆ ಕಾರಣವಾಗಿವೆ.

'ಪಿರಿಯಾಪಟ್ಟಣದ ಕಾಳಗ' ಮೈಸೂರು ಒಡೆಯರಿಗೂ ಪಿರಿಯಾಪಟ್ಟಣದ ಚಂಗಾಳ್ವ ದೊರೆ ವೀರರಾಜನಿಗೂ ನಡೆದ ಯುದ್ಧ ವಿವರಗಳನ್ನೊಳಗೊಂಡಿದ್ದು, ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿದೆ. 'ಮಹಾರಾಜ'ರುಗಳ ಆಧಿಪತ್ಯದಲ್ಲಿ ಸ್ಥಳೀಯ

ಸಾಮಂತರು, ಪಾಳೆಯಗಾರರು ತಮ್ಮ ಸಾಂಸ್ಕೃತಿಕ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟದ ಪ್ರತೀಕದಂತಿರುವ ಈ ಕಾವ್ಯ ಇತಿಹಾಸ ಗ್ರಂಥಗಳು ಕಾಣಿಸದ ಜನಸಾಮಾನ್ಯರ ಸ್ವಾತಂತ್ರ್ಯಪ್ರೇಮವನ್ನು ಪ್ರಕಟಿಸುವ ವಿಶಿಷ್ಟ ಕೃತಿಯಾಗಿದೆ.

'ಜನಪದ ರಾಮಾಯಣ', ಡಾ.ರಾಗೌ ಹಾಗೂ ಡಾ.ಬಿ.ಎಸ್. ತಲ್ವಾಡಿಯವರ ಜೊತೆಯಲ್ಲಿ ಪ್ರಕಟಿಸಿದ ಕಾವ್ಯ. ಇದನ್ನು 'ತ್ರಿಮೂರ್ತಿಗಳ ರಾಮಾಯಣ' ಎಂದು ವಿದ್ವಾಂಸರು ಕೊಂಡಾಡಿದ್ದಾರೆ. ಇದರಲ್ಲಿ ಒಟ್ಟು ನಾಲ್ಕು ಭಾಗಗಳಿದ್ದು ಈ ನಾಲ್ಕು ಭಾಗಗಳನ್ನು ಬೇರೆ ಬೇರೆ ಪರಿಸರದ ಭಿನ್ನ ಗಾಯಕರು ಹಾಡಿದ್ದಾರೆ. ಇದು ಈ ಕಾವ್ಯದ ವೈಶಿಷ್ಟ್ಯವೂ ಆಗಿದೆ. ಜನಪದ ಸಾಹಿತ್ಯ ಸಂದರ್ಭದಲ್ಲಿ ಪ್ರಕಟವಾದ ಮೊಟ್ಟಮೊದಲ ರಾಮಾಯಣ ಕಾವ್ಯ ಇದಾಗಿದೆ. ಸೀತಾ ಪ್ರಧಾನವಾದ ಈ ಕಾವ್ಯ ಶಿಷ್ಟ ರಾಮಾಯಣ ಕಾವ್ಯಗಳ ಮೇಲೆ ಹೊಸಬೆಳಕು ಚೆಲ್ಲುತ್ತದೆ. ಇದಕ್ಕೆ ರಾಗೌ ಅವರು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದು, ಮೌಲಿಕವಾದ ಈ ವಿಮರ್ಶಾತ್ಮಕ ಪ್ರಸ್ತಾವನೆ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

'ಮಾಗಡಿ ಕೆಂಪೇಗೌಡ' ಪಿ.ಕೆ.ಆರ್. ಪ್ರಕಟಿಸಿರುವ ಮತ್ತೊಂದು ಮೌಲಿಕ ಕೃತಿಯಾಗಿದೆ. ದೊಂಬಿದಾಸರು, ತೆಲುಗು ಜಂಗಮರು, ತೆಲುಗು ಬಣಜಿಗರು ಹಾಗೂ ಸಾಮಾನ್ಯ ಗಾಯಕರು ಹಾಡಿರುವ ಒಟ್ಟು ಎಂಟು ಪಾಠಗಳನ್ನಿಟ್ಟುಕೊಂಡು ಈ ಕಾವ್ಯವನ್ನು ಪರಿಷ್ಕರಿಸಿ ಸಂಪಾದಿಸಲಾಗಿದೆ. ಕಾವ್ಯದ ಹಿನ್ನೆಲೆಯಲ್ಲಿ ಮಾಗಡಿ ಕೆಂಪೇಗೌಡನನ್ನು ಕುರಿತ ಐತಿಹಾಸಿಕ ಸಂಗತಿಗಳನ್ನು ಇಲ್ಲಿ ವಿಶ್ಲೇಷಿಸಿರುವುದು ವಿಶೇಷವಾಗಿದೆ. ಈ ಕಾವ್ಯವನ್ನು ಸಂಗೀತ ಬಲ್ಲ ಸಹೃದಯರು ಹಾಡಿಕೊಳ್ಳಲು ಸಹಕಾರಿಯಾಗುವಂತೆ ಸಂಗೀತ ವಿದುಷಿ ಶ್ರೀಮತಿ ಎಂ.ವಿ.ರತ್ನ ಅವರು ಹಾಕಿರುವ ಸ್ವರ ಪ್ರಸ್ತಾರವನ್ನು ನೀಡಲಾಗಿದೆ.

ಪ್ರಧಾನ ಇತಿಹಾಸ ಗ್ರಂಥಗಳಲ್ಲಿ ಅಷ್ಟಾಗಿ ದಾಖಲಾಗದಿರುವ ಯಲಹಂಕ ನಾಡಪ್ರಭುಗಳ ಜೀವನ ವೃತ್ತಾಂತ ಐತಿಹ್ಯ ರೂಪದಲ್ಲಿಯಾದರೂ ಇಲ್ಲಿ ದೊರೆಯುವುದರಿಂದ ಇತಿಹಾಸದ

ರಚನೆಯಲ್ಲಿನ ಕೊರತೆಗಳನ್ನು ತುಂಬಿಕೊಳ್ಳುವುದರಲ್ಲಿ ಈ ಕೃತಿ ಬಲುಮುಖ್ಯ ಆಧಾರವಾಗಿದೆ. ಮಾಗಡಿ ಕೆಂಪೇಗೌಡನ ಚರಿತ್ರೆಯ ಜೊತೆಜೊತೆಯಲ್ಲಿಯೇ ಇತರ ಸಾಮಂತರ ಕಥೆಗಳು ಇಲ್ಲಿ ಸೇರ್ಪಡೆಯಾಗುತ್ತಾ ಹೋಗುವುದರಿಂದ ಇದು 'ಸಾಮಂತರ ಚರಿತ್ರೆ'ಯನ್ನು ದಾಖಲಿಸುವ ಅಪರೂಪದ ಕೃತಿಯೂ ಆಗಿದೆ.

'ಜನಪದ ಬಸವಪುರಾಣ' ಮತ್ತು 'ಕರಪಾಲ ಬಸವಪುರಾಣ' ಕಾವ್ಯಗಳು ಬಸವಣ್ಣನ ಜೀವನಗಾಥೆಯನ್ನು ಆಧಾರವಾಗಿರಿಸಿಕೊಂಡಿರುವ ಭಿನ್ನ ಅಭಿವ್ಯಕ್ತಿ ವಿಧಾನದ ಕಾವ್ಯಗಳಾಗಿವೆ. 'ಜನಪದ ಬಸವಪುರಾಣ' ಒಟ್ಟು ಐದು ಮಂದಿ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ ಗಾಯಕರು ಹಾಡಿರುವ ಒಟ್ಟು ಹತ್ತು ಕಾವ್ಯಭಾಗಗಳನ್ನು ಒಳಗೊಂಡಿದೆ.ಜನಪದರು ತಮ್ಮ ಕಲ್ಪನೆಯಲ್ಲಿ ಕಂಡಂತೆ ಬಸವಣ್ಣ ಮತ್ತು ಅವನ ಸಮಕಾಲೀನ ಶರಣರ ವ್ಯಕ್ತಿ ಚಿತ್ರಣವನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

'ಜನಪದ ಮಹಾಭಾರತ' ಡಾ.ಪಿ.ಕೆ.ರಾಜಶೇಖರ ಅವರು ಬಲು ಜತನದಿಂದ ಸಂಪಾದಿಸಿಕೊಟ್ಟಿರುವ ಮತ್ತೊಂದು ಮಹಾಕಾವ್ಯ. ಜನಪದ ವ್ಯಾಸನೆಂದು ವಿದ್ವಾಂಸರಿಂದ ಸಾರ್ಥಕವಾಗಿ ಕರೆಸಿಕೊಂಡ ಬೆಟ್ಟದಬೀಡು ಸಿದ್ದಶೆಟ್ಟಿಯವರು ಹಾಡಿರುವ ಮಹತ್ಕೃತಿ ಇದು. ಒಟ್ಟು ೧೬೦ ಪರ್ವಗಳ ಈ ಕೃತಿ ೪೩,೦೦೦ ಪಾದಗಳ ಸುದೀರ್ಘ ಮಹಾಕಾವ್ಯವಾಗಿದೆ. ವ್ಯಾಸಭಾರತಕ್ಕೆ ಪ್ರತಿಕ್ರಿಯೆ ರೂಪದಲ್ಲಿ ಮೈದಾಳಿರುವ ಈ ಕಾವ್ಯ ಮಹಾಭಾರತದ ಕಥೆಯನ್ನು ಹೇಳುತ್ತಲೇ 'ಕನ್ನಡ ಚಿಂತನೆ'ಯನ್ನು ಮೌನವಾಗಿ ಮಂಡಿಸುತ್ತಾ ಸಾಗುತ್ತದೆ. ಒಂದು ಜನಾಂಗದ ಜೀವನ ಮೌಲ್ಯವನ್ನು ಬಿತ್ತರಗೊಳಿಸುವುದು ಈ ಕಾವ್ಯದ ಪ್ರಧಾನ ಉದ್ದೇಶವಾಗಿದೆ. ಮಾನವೀಯ ಬದುಕಿನ ಸಾರ್ವಕಾಲಿಕ ಸತ್ಯಸಂದೇಶಗಳನ್ನು ಈ ಕಾವ್ಯ ಸಾರುತ್ತದೆ. ಪುರಾಣ ಪಾತ್ರಗಳಿಗೆ ಮತ್ತು ಪ್ರಸಂಗಗಳಿಗೆ ಈ ಕಾವ್ಯ ವರ್ತಮಾನದ ವ್ಯಾಖ್ಯಾನವನ್ನು ಮಾಡುತ್ತದೆ. ಘಟನೆ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಕಥನಶೈಲಿ ಇಲ್ಲಿ ಬದಲಾಗುತ್ತಾ ಹೋಗುತ್ತದೆ. ಇದು ಹಾಡಿದ ಗಾಯಕ, ಕವಿಯ ಪ್ರತಿಭೆಯಾಗಿದ್ದು

ಕಾವ್ಯಕ್ಕೆ ಸಾಹಿತ್ಯಾತ್ಮಕವಾದ ಹೊಸ ಆಯಾಮವನ್ನು ನೀಡುತ್ತದೆ.

ಜನಪದರ ಲೋಕಪ್ರಜ್ಞೆ, ಪರಿಹಾಸ ಮನೋಧರ್ಮ, ಕಥಾಬೆಳವಣಿಗೆಯಲ್ಲಿ ಕಾಣಿಸಿಕೊಳ್ಳುವ ಕಲ್ಪನಾಶಕ್ತಿ ಇಲ್ಲಿ ವಿಶಿಷ್ಟವಾಗಿ ಮೈದಾಳಿವೆ. ವಿಸ್ತಾರ ಹರಹಿನ ಜನಪದ ಮಹಾಭಾರತದಲ್ಲಿ ಘಟನೆಯೊಡನೆ ಘಟನೆ ಥಳುಕು ಹಾಕಿಕೊಳ್ಳುತ್ತ ಸಂಪೂರ್ಣತ್ವವನ್ನು ಪಡೆದುಕೊಳ್ಳುತ್ತದೆ. 'ಪರಂಪರೆಯ ಪ್ರತಿಭೆ'ಯ ಫಲಶ್ರುತಿಯಾಗಿರುವ ಈ ಕಾವ್ಯ ಆಶ್ಚರ್ಯಕರ ಪಾತ್ರ ಸೃಷ್ಟಿ ಮತ್ತು ಸನ್ನಿವೇಶ ನಿರ್ಮಾಣಗಳಿಂದ ವಿಶೇಷ ಗಮನ ಸೆಳೆಯುತ್ತದೆ. ಕೃಷಿಕ ಸಮುದಾಯದ ಪುನರ್‌ಸೃಷ್ಟಿಯಂತೆಯೂ ಈ ಕಾವ್ಯ ಭಾಸವಾಗುತ್ತದೆ. 'ಕೃಷಿ ಸಂಸ್ಕೃತಿಗೆತ್ತಿದ ಹೊನ್ನಾರು', 'ವಿದ್ವತ್ ಪ್ರಪಂಚಕ್ಕೆ ಮಹತ್ತರ ಕೊಡುಗೆ', 'ಸ್ಥಳೀಯ ಸಂಸ್ಕೃತಿಯ ಹೊಸಭಾಷ್ಯ', 'ಕಲಿಯದವರ ಕಾಮಧೇನು', 'ದೇಸಿ ಸೊಗಡಿನ ಮಹಾಕಾವ್ಯ', 'ಮಣ್ಣಿನಲ್ಲಿ ಮೂಡಿದ ಮಹಾಪ್ರತಿಭೆ', 'ಕ್ಷೇತ್ರ ಕಾರ್ಯದ ಮಹಾಘನ', 'ಅನನ್ಯ ಮಹಾಕೃತಿ' – ಇತ್ಯಾದಿ ಅಭಿದಾನಗಳಿಗೆ ಪಾತ್ರವಾಗಿರುವ ಈ ಮಹಾಕಾವ್ಯ ಕನ್ನಡ ಜಾನಪದದ ವ್ಯಾಪ್ತಿಯನ್ನು ಹೆಚ್ಚಿಸಿದೆ.

ಡಾ.ಪಿ.ಕೆ.ರಾಜಶೇಖರ ಅವರು ಜಾನಪದವನ್ನು ಹಚ್ಚಿಕೊಂಡಿರುವ ಬಗೆಯನ್ನು 'ಜನಪದ ಮಹಾಭಾರತ'ದ ಹಿನ್ನೆಲೆಯಲ್ಲಿ ಇಲ್ಲಿಯೇ ಹೇಳುವುದು ಉಚಿತ. 'ಭುವನದ ಭಾಗ್ಯ' ಎಂಬಂತೆ ದೊರೆತಿರುವ ಜನಪದ ಮಹಾಭಾರತವನ್ನು ಆ ಕೃತಿಯ ಘನತೆಗೆ ತಕ್ಕಂತೆ ಪ್ರಕಟಿಸಬೇಕೆಂಬ ಹಂಬಲ ರಾಜಶೇಖರ ಅವರದ್ದಾಗಿತ್ತು. ಹಲವಾರು ವರ್ಷಗಳಿಂದ ಹಸ್ತಪ್ರತಿ ರೂಪದಲ್ಲೇ ಉಳಿದಿದ್ದ ಈ ಬೃಹತ್ಕೃತಿಯನ್ನು ಪ್ರಕಟಿಸಲು ದೊಡ್ಡಮನೆ ಎನ್.ಕೃಷ್ಣೇಗೌಡ ಅವರು ಉದಾರ ಮನಸ್ಸಿನಿಂದ ಧನಸಹಾಯ ಮಾಡಿದ್ದು ದಿಟ. ಆದರೆ ಪುಸ್ತಕ ಪ್ರಕಟಣೆಗೆ ಹಣದ ಕೊರತೆ ಕಂಡು ಬಂದಾಗ ಮೈಸೂರಿನಲ್ಲಿ ತಮ್ಮದಾಗಿ ಇದ್ದ ಒಂದೇ ಒಂದು ಸೈಟನ್ನು ಮಾರಿ ಅಂದುಕೊಂಡಂತೆ ಈ ಮಹಾಕಾವ್ಯವನ್ನು ಪ್ರಕಟಿಸಿದ್ದಾರೆ. ಈಗ ನಿವೃತ್ತರಾಗಿರುವ ಅವರಿಗೆ ಸ್ವಂತಮನೆಯೊಂದಿಲ್ಲ.

ಆ ಬಗ್ಗೆ ಅವರು ಚಿಂತಿಸಿಯೂ ಇಲ್ಲ. 'ಕಾಲಗರ್ಭದಲ್ಲಿ ಅಡಗಿ ಕನ್ನಡಿಗರ ಕೈತಪ್ಪಿ ಹೋಗಬಹುದಾಗಿದ್ದ ಮಹಾಕಾವ್ಯವನ್ನು ಕನ್ನಡಿಗರ ಕೈಗೊಪ್ಪಿಸಿದ ಮಹತ್ಕಾರ್ಯಕ್ಕಿಂತ ನಾನೊಂದು ಮನೆ ಕಟ್ಟಿಕೊಳ್ಳುವುದು ದೊಡ್ಡದೆ!' ಎನ್ನುತ್ತಾ ನಿರುಮ್ಮಳವಾಗುವ ಪಿ.ಕೆ.ಆರ್.ಅವರನ್ನು 'ಜಾನಪದ ಜೋಗಿ', ಶ್ರೀಮಾನ್ ಜಾನಪದ' ಎಂದು ಜಾನಪದ ವಿದ್ವತ್‌ಲೋಕ ಕರೆದದ್ದು ಖಂಡಿತ ಸಾರ್ಥಕವಾಗಿದೆ.

ಜನಪದ ಕಾವ್ಯದ ಜೀವಂತಿಕೆ ಇರುವುದು ಅದರ ಗೇಯತೆಯಲ್ಲಿ. ಅಂದರೆ ಜನಪದ ಗೀತೆಗಳು ಹಾಡಿಸಿ ಕೇಳಬೇಕಾದವುಗಳು; ಹಾಡಿ, ಕೇಳಿಸಿ ಆನಂದಿಸಬೇಕಾದವುಗಳು. ಜಾನಪದದ ಒಂದು ವಿಶಿಷ್ಟ ಲಕ್ಷಣವಾದ 'ಅವಿನಾಶಿ ಗುಣ' ವಿನಾಶವಾಗಬಾರದು ಎಂಬ ಮಹಾಹಂಬಲ ರಾಜಶೇಖರ ಅವರದು. ಹಾಗಾಗಿ ಅವರು ತಾವು ಸಂಗ್ರಹಿಸಿದ, ಹಾಡಿ ಪ್ರಚುರಗೊಳಿಸಿದ ಅನೇಕ ಜನಪದ ಗೀತೆಗಳನ್ನು ಹಾಡಬಲ್ಲ ನಾಡವರೆಲ್ಲ ಹಾಡಲಿ ಎಂಬ ಉದ್ದೇಶದಿಂದ ಹಲವು ಜನಪದ ಗೀತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಅವ್ವ ನಿನದನಿ ಅಪರಂಜಿ', 'ಕೋಗಿಲಾಗಿ ಕೂಗುತೀಯಲ್ಲೊ', 'ಬಾರಯ್ಯ ಬೆಳದಿಂಗಳೆ', 'ಹಾಡೊ ಮುತ್ತಿನರಗಿಣಿ' – ಇವು ಅಂತಹ ಕೃತಿಗಳಾಗಿವೆ. ಒಂದು ಕಾಲದಲ್ಲಿ ಪಿ.ಕಾಳಿಂಗರಾಯರು ಹಾಡಿ ಜನಪ್ರಿಯಗೊಳಿಸಿದ್ದ ಕೆಲವು ಜನಪದ ಗೀತೆಗಳನ್ನು ಹೊರತುಪಡಿಸಿದರೆ ಉಳಿದ ಗೀತೆಗಳ ಸಾಹಿತ್ಯ ಹಾಡುಗಾರರಿಗೆ ಲಭ್ಯವಿರಲಿಲ್ಲ. ಅಂತಹ ಸನ್ನಿವೇಶದಲ್ಲಿ ಕೃತಕ ಸಾಹಿತ್ಯ ಸೃಷ್ಟಿ ಹಾಗೂ ಅದರ ಗಾಯನಕ್ಕೆ ಪ್ರಯತ್ನಿಸಲಾಗುತ್ತಿತ್ತು. ಇಂಥದ್ದನ್ನು ತಪ್ಪಿಸಬೇಕಾದರೆ ಶುದ್ಧ ಜನಪದ ಗೀತ ಸಾಹಿತ್ಯವನ್ನು ದೊರಕಿಸಿಕೊಡಬೇಕಾದ ಅನಿವಾರ್ಯತೆ ಇತ್ತು. ಇಂತಹ ಅನಿವಾರ್ಯತೆಯನ್ನು ಪೂರೈಸಿದ ಸತ್ಫಲಗಳಾಗಿ ಈ ಸಂಕಲನಗಳು ಕಂಡು ಬರುತ್ತವೆ.

ಬಿಡಿಗೀತೆಗಳು, ಮಹಾಕಾವ್ಯ, ಖಂಡಕಾವ್ಯ, ಕಥನಕಾವ್ಯಗಳಿಂದ ಆಯ್ದ ಜನಪ್ರಿಯ ಭಾಗಗಳಿರುವ ಈ ಸಂಕಲನಗಳಲ್ಲಿ ವಿವಿಧ

ಸಂಪ್ರದಾಯಗಳಿಗೆ ಸೇರಿದ ಗೀತೆಗಳು ಸೇರ್ಪಡೆಗೊಂಡಿವೆ. ಬಿಡಿಗೀತೆಗಳಲ್ಲಿ ಜನಪದ ಭಕ್ತಿಗೇತೆಗಳು, ಪ್ರೇಮಗೀತೆಗಳು, ಕೋಲುಪದಗಳು, ಸೋಬಾನೆ ಹಾಡುಗಳು, ಗೀಗೀ ಪದಗಳು, ತತ್ವಪದಗಳು ಸೇರಿವೆ. ನೀಲಗಾರ, ದೇವರಗುಡ್ಡರು, ಚೌಡಿಕೆಯವರು, ದೊಂಬಿದಾಸರು– ಈ ಸಂಪ್ರದಾಯದವರು ಹಾಡುವ ಮುಖ್ಯಗೀತೆ ಮತ್ತು ಕಥನಭಾಗಗಳು ಇಲ್ಲಿ ಸೇರಿರುವುದು ವಿಶೇಷ. ಒಂದರ್ಥದಲ್ಲಿ ಈ ಸಂಕಲನಗಳು ದಕ್ಷಿಣ ಕರ್ನಾಟಕದ ಜನಪದ ಗೀತ ಸಾಹಿತ್ಯದ ಪ್ರಾತಿನಿಧಿಕ ಕೃತಿಗಳಂತೆ ಕಂಡು ಬರುತ್ತವೆ. ಇಂದು ಎಲ್ಲೆಂದರಲ್ಲಿ– ವಿಶೇಷವಾಗಿ ಜನಪದ ಗೀತ ಗಾಯನ ಸ್ಪರ್ಧೆಗಳಲ್ಲಿ ಮತ್ತೆ ಮತ್ತೆ ಮೊಳಗುವ ಬೆಟ್ಟದ ಚಾಮುಂಡಿ ಕಾವ್ಯದ 'ಉತ್ತನಳ್ಳಿ ಉರಿಮಾರಿಯ ಪ್ರಣಯ ರಾಯಭಾರಿ ಸಂದರ್ಭ', ಮಲೆಯ ಮಾದೇಶ್ವರ ಮಹಾಕಾವ್ಯದ 'ಸತ್ಯ ಸರಣೆ ಸಂಕಮ್ಮನ ಬಲಗೈಭಾಷೆ ಕವಟ್ಲು', 'ಕಾರಯ್ಯ ಬಿಲ್ಲಯ್ಯರ ಕತ್ತಿ ಪವಾಡ ಪ್ರಸಂಗ', ಮಂಟೇಸ್ವಾಮಿ ಮಹಾಕಾವ್ಯದ 'ಕೆಂಪಾಚಾರಿ ಕುಲುಮೆ ಪ್ರಸಂಗ' ಇತ್ಯಾದಿ ಕಾವ್ಯ ತುಣುಕುಗಳು ಮೊದಲಿಗೆ ಪ್ರಕಟಗೊಂಡದ್ದು ಈ ಸಂಕಲನಗಳಲ್ಲೆ. ಬಹು ಬೇಡಿಕೆಯ ಈ ಪುಸ್ತಕಗಳು ಪ್ರಕಟಗೊಂಡ ಅನತಿ ಕಾಲದಲ್ಲೆ ಬಹುಬೇಗ ಮಾರಾಟಗೊಂಡಿದ್ದು ಇವುಗಳ ಜನಪ್ರಿಯತೆ ಹಾಗೂ ಮೌಲಿಕತೆಗೆ ಸಾಕ್ಷಿಯಾಗಿದೆ. ತಾನು ಹಾಡುತ್ತಾ ಇತರರೂ ಹಾಡುವಂತೆ ಪ್ರೇರೇಪಿಸುವುದೇ ಜನಪದ ಗೀತ–ಸಂಗೀತದ ವೈಶಿಷ್ಟ್ಯ. ಉಲ್ಲೇಖಿತ ಕೃತಿಗಳು ಜಾನಪದದ ಈ ವೈಶಿಷ್ಟ್ಯಕ್ಕೆ ಸಾಕ್ಷಿಯಾಗಿವೆ.

ಡಾ.ಪಿ.ಕೆ.ರಾಜಶೇಖರ ಅವರ ಆಸಕ್ತಿಯನ್ನು ಕೆರಳಿಸಿದ ಜನಪದ ವಿಜ್ಞಾನದಲ್ಲಿ ಚಮತ್ಕಾರ ಗಣಿತ ವಿಶೇಷವಾದದ್ದು. ಈ ಪ್ರಕಾರಕ್ಕೆ ಸಂಬಂಧಿಸಿದ ಒಟ್ಟು ಮೂರು ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ. 'ಆಯ್ದ ಜನಪದ ಲೆಕ್ಕಗಳು', 'ಜನಪದ ಗಣಿತ ಪ್ರಪಂಚ' ಮತ್ತು 'ಜನಪದ ಚಮತ್ಕಾರ ಗಣಿತ' ಇವೇ ಆ ಕೃತಿಗಳು. ಆಯ್ದ ಜನಪದ ಲೆಕ್ಕಗಳು ಗ್ರಂಥದಲ್ಲಿ ಒಟ್ಟು ಅರವತ್ತೊಂದು ಜನಪದ ಲೆಕ್ಕಗಳ ಜೊತೆಗೆ ಗಣಿತಾತ್ಮಕ ಚಮತ್ಕಾರಗಳಿಗೆ ಉತ್ತರಗಳನ್ನು ಸಂಗ್ರಹಿಸಿಕೊಡಲಾಗಿದೆ.

‘ಜನಪದ ಚಮತ್ಕಾರ ಗಣಿತ’ ಕೃತಿ ಕೂಡ ಇದೇ ಬಗೆಯದಾಗಿದ್ದು ಇದರಲ್ಲಿ ಒಟ್ಟು ೯೨ ಲೆಕ್ಕಗಳನ್ನು ನೀಡಲಾಗಿದೆ. ಜನಪದರು ಅನಕ್ಷರಸ್ಥರಾದರೂ ಅವಿದ್ಯಾವಂತರಲ್ಲ ಎಂಬ ಮಾತಿಗೆ ಈ ಎರಡೂ ಕೃತಿಗಳು ಅಪೂರ್ವ ದಾಖಲೆಗಳನ್ನೊದಗಿಸುತ್ತವೆ. ಅಕ್ಷರಸ್ಥ ನಾಗರೀಕರೂ ಉತ್ತರಿಸಲು ತಿಣುಕಾಡಬಹುದಾದಂಥ ಅಥವಾ ಉತ್ತರಿಸಲು ಅಸಾಧ್ಯವಾಗುವಂಥ ಲೆಕ್ಕಗಳನ್ನು ಈ ಪುಸ್ತಕಗಳಲ್ಲಿ ಕಾಣಬಹುದು. ಜಾಣ್ಮೆಯನ್ನು ಉಪಯೋಗಿಸಿಕೊಂಡು ಮೋಸದ ಲೆಕ್ಕಾಚಾರಗಳನ್ನು ಮಾಡುತ್ತ ಜನರನ್ನು ವಂಚಿಸುವ ‘ನಾಗರೀಕ ಬುದ್ಧಿವಂತರ’ ಸಂದರ್ಭದಲ್ಲಿ ಯಾರನ್ನೂ ವಂಚಿಸದ, ಅತಿಬುದ್ಧಿವಂತಿಕೆಯಿಂದ ಯಾರಿಗೂ ಮಂಕುಬೂದಿ ಎರಚದ ಜನಪದರ ಗಣಿತಜ್ಞಾನ ಎಂಥವರಿಗೂ ಬೆರಗು ಮೂಡಿಸುತ್ತದೆ. ಜನಪದರ ತಿಳುವಳಿಕೆಯನ್ನು ಅಪಾರ್ಥಮಾಡಿಕೊಂಡು ಬೀಗುವ ಭ್ರಮಾನಿಷ್ಠ ನಾಗರೀಕರಿಗೆ ಈ ಕೃತಿ ಗ್ರಾಮೀಣರ ಗಣಿತಜ್ಞಾನವನ್ನು ಪರಿಚಯಿಸುವುದರ ಮೂಲಕ ಅವರ ಘನತೆ–ಅನನ್ಯತೆಯನ್ನು ಅರಿವಿಗೆ ತರುತ್ತದೆ. ಚಮತ್ಕಾರ ಗಣಿತದಂಥ ವಿಷಯವನ್ನು ‘ಚಮತ್ಕಾರ’ದಲ್ಲಿರುವ ಕುತೂಹಲ–ಸ್ವಾರಸ್ಯಗಳಿಗೆ ಊನವಾಗದಂತೆ ದಾಖಲಿಸುವುದು ಸುಲಭವಾದ ಕೆಲಸವಲ್ಲ. ಆದರೆ ಪಿ.ಕೆ.ಆರ್.ಜಾನಪದದೊಡನೆ ಸ್ಥಾಪಿಸಿಕೊಳ್ಳುವ ತಾದಾತ್ಮ್ಯದಿಂದಾಗಿ ಇಂಥವು ಯಥಾವತ್ತಾಗಿ ದಾಖಲುಗೊಳ್ಳುತ್ತವೆ.

‘ಜನಪದ ಗಣಿತ ಪ್ರಪಂಚ’ ರಾಜಶೇಖರ ಅವರು ಸಂಪಾದಿಸುವ ಮತ್ತೊಂದು ವಿಶಿಷ್ಟ ಕೃತಿ. ಉದ್ದ, ಅಗಲ, ಆಳ, ಎತ್ತರ, ಗಾತ್ರ – ಇವುಗಳನ್ನು ಅಳೆಯಲು ಜನಪದರಲ್ಲಿ ವಿಶೇಷ ಮಾನದಂಡಗಳಿವೆ. ಇವುಗಳಲ್ಲಿ ಪ್ರಾದೇಶಿಕ ಭಿನ್ನತೆಯೂ ಉಂಟು. ಇಂತಹ ಮಾನದಂಡಗಳು ಪಕ್ಕಾ ದೇಸೀ ಮಾದರಿಗಳಾಗಿದ್ದು ಕನ್ನಡ ಜನಪದ ಸಂಸ್ಕೃತಿಯ ಕುರುಹುಗಳು ಆಗಿವೆ. ಇಂತಹ ಸಂಗತಿಗಳ ಸಂಪಾದನೆ ‘ಟೇಬಲ್ ವರ್ಕ್’ನಂಥ ಅಧ್ಯಯನಗಳಿಂದ ಸಾಧ್ಯವಾಗುವಂಥದ್ದಲ್ಲ. ವಿಸ್ತಾರವಾದ ಕ್ಷೇತ್ರಕಾರ್ಯದ ಬಗೆಗಿನ ಒಲವು, ಪ್ರಾಯೋಗಿಕ ನೆಲೆಯಲ್ಲಿನ ನಿಷ್ಠೆ ಹಾಗೂ ದಕ್ಕಿದ್ದನ್ನು ಶಾಸ್ತ್ರೀಯ ಶುದ್ಧವಾಗಿ ಸಂಪಾದಿಸಿ ಪ್ರಕಟಿಸುವ

ಪ್ರಾಮಾಣಿಕತೆಯನ್ನು ಕಾಣಬಹುದು. ವಿಶೇಷವಾಗಿ ಜನಪದ ಕಥೆ-ಕಾವ್ಯಗಳಲ್ಲಿ, ಜನಪದ ಜೀವನವನ್ನಾಧರಿಸಿ ಜನಪದ ಶೈಲಿಯಲ್ಲಿಯೆ ಬರೆದ ಶಿಷ್ಟನೆಲೆಯ ಕಾವ್ಯ-ಕಥೆ-ಕಾದಂಬರಿಗಳಲ್ಲಿ ಗ್ರಾಮೀಣರ ಅಳತೆಗೆ ಸಂಬಂಧಿಸಿದ ಪರಿಭಾಷೆಗಳು ಬಳಕೆಯಾಗುತ್ತವೆ. ಅವುಗಳನ್ನು ಅರ್ಥೈಸಿಕೊಳ್ಳುವಲ್ಲಿ 'ಜನಪದ ಗಣಿತ ಪ್ರಪಂಚ' ತುಂಬಾ ಉಪಯುಕ್ತ ಪರಾಮರ್ಶನ ಗ್ರಂಥವಾಗಿದೆ.

ಡಾ.ಪಿ.ಕೆ.ರಾಜಶೇಖರ ಅವರು ಕೇವಲ ಜನಪದ ಕಾವ್ಯ, ಮಹಾಕಾವ್ಯ ಸಂಪಾದನೆಗಷ್ಟೆ ತಮ್ಮನ್ನು ಸೀಮಿತಗೊಳಿಸಿಕೊಂಡವರಲ್ಲ. ಜನಪದ ಸಾಹಿತ್ಯದ ಇತರ ಪ್ರಕಾರಗಳ ಸಂಪಾದನಾ ಕಾರ್ಯವನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಿದ್ದಾರೆ. ಕಾವ್ಯ ಪ್ರಕಾರವನ್ನು ಹೊರತುಪಡಿಸಿದರೆ ಇವರಿಗೆ ಪ್ರಿಯವಾದ ಇತರ ಸಾಹಿತ್ಯ ಪ್ರಕಾರಗಳೆಂದರೆ ಜನಪದ ಕಥೆ ಮತ್ತು ಜನಪದ ಗಾದೆ. ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಎರಡು ಮೌಲಿಕ ಕೃತಿಗಳನ್ನು ಪಿ.ಕೆ.ಆರ್. ಶಿಸ್ತುಬದ್ಧವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. 'ಮಾತಿನರಗಿಣಿ' ಮತ್ತು 'ಪುರುಷನ ಪುಣ್ಯ ನಾರಿಭಾಗ್ಯ' ಇವೇ ಆ ಎರಡು ಕೃತಿಗಳು.

'ಮಾತಿನರಗಿಣಿ' ಸಂಕಲನ ಒಟ್ಟು ಹದಿನೈದು ಕಥೆಗಳನ್ನೊಳಗೊಂಡಿದೆ. ಗಾತ್ರ, ವಸ್ತು, ವಿವರ, ಆಶಯಗಳ ದೃಷ್ಟಿಯಿಂದ ಭಿನ್ನವಾದ ಕಥೆಗಳು ಇಲ್ಲಿವೆ. ಇಲ್ಲಿನ ಬಹುತೇಕ ಕಥೆಗಳು ಮೊದಲಿಗೆ ಇಲ್ಲಿ ಪ್ರಕಟಗೊಂಡಿರುವುದು ವಿಶೇಷವಾಗಿದೆ. ಇದು. ಡಾ.ಪಿ.ಕೆ.ರಾಜಶೇಖರ ಅವರ ಸಂಪಾದನಾ ವೈಶಿಷ್ಟ್ಯವಾಗಿದೆ. ಈಗಾಗಲೇ ಪ್ರಕಟಗೊಂಡಿರುವಂಥದ್ದನ್ನೇ ಮತ್ತೊಮ್ಮೆ ಪ್ರಕಟಿಸಿ ತಮ್ಮ ಹೆಸರಿನಲ್ಲೊಂದು ಗ್ರಂಥವನ್ನು ದಾಖಲಿಸಿಕೊಳ್ಳುವುದು ಪಿ.ಕೆ. ರಾಜಶೇಖರ ಅವರ ಜಾಯಮಾನವಲ್ಲ. ಈ ಮಾತು ಇವರ ಎಲ್ಲಾ ಸಂಪಾದಿತ ಕೃತಿಗಳಿಗೂ ಅನ್ವಯಿಸುತ್ತದೆ. ಪ್ರಸ್ತುತ ಸಂಕಲನದ ಕಥೆಗಳಲ್ಲಿ ಮನೋರಂಜಕ ಗುಣ, ಮನೋವೈಜ್ಞಾನಿಕ ಸಂಗತಿ, ಭ್ರಾಮಕ ಹಾಗೂ ವಾಸ್ತವಿಕ ವಿಷಯಗಳಿದ್ದು ಓದುಗನಿಗೆ ವಿಶೇಷ

ಆನಂದ ಮತ್ತು ಅನುಭವಗಳನ್ನು ನೀಡುತ್ತದೆ. ಜನಪದ ಸಂಸ್ಕೃತಿಯ ಮಹತ್ವದ ದಾಖಲೆ ಹಾಗೂ ಸಾಂಪ್ರದಾಯಿಕ ಕಲೆಯ ಸಾಕ್ಷಿಯಾಗಿ ಇಲ್ಲಿನ ಕಥೆಗಳು ಗಮನ ಸೆಳೆಯುತ್ತವೆ. ಅಭಿಜಾತಗುಣ ಹಾಗೂ ಭಾವಗೀತಾತ್ಮಕ ಗುಣಗಳು ಇಲ್ಲಿ ಕಂಡು ಬರುತ್ತವೆ. ಇಲ್ಲಿನ ಕಥೆಗಳನ್ನು ಪಿರಿಯಾಪಟ್ಟಣದ ಶ್ರೇಷ್ಠ ಜನಪದ ಕತೆಗಾರ್ತಿ ನಿಂಗಮ್ಮ ಹೇಳಿದ್ದು, ಈ ಕಲಾವಿದೆ ಒಬ್ಬ ಅಪರೂಪದ ಪ್ರತಿಭಾವಂತೆಯಾಗಿರುವುದರಿಂದ ಇಲ್ಲಿನ ಕಥೆಗಳಿಗೆ ಒಂದು ಶ್ರೇಷ್ಠತೆ ಪ್ರಾಪ್ತವಾಗಿದೆ.

'ಪುರುಷನ ಪುಣ್ಯ ನಾರಿಭಾಗ್ಯ' ಎಂಬುದು ವಿಶಿಷ್ಟ ಜಾನಪದ ಕಥಾ ಸಂಕಲನವಾಗಿದೆ. ಇದು ಮುಖ್ಯವಾಗಿ ಗಾದೆ ಕಥೆಗಳ ಕೃತಿಯಾಗಿದೆ. ಇದರಲ್ಲಿ ಒಟ್ಟು ನೂರ ನಲವತ್ತು ಕಥೆಗಳಿವೆ. ಇದರಲ್ಲಿ ಜನಪದ ಕಥೆಯ ಎಲ್ಲಾ ಪ್ರಕಾರಗಳೂ ಇರುವುದು ವಿಶೇಷ. ರಮ್ಯಕಥೆಗಳು, ನೀತಿಕಥೆಗಳು, ಹಾಸ್ಯಕಥೆಗಳು, ಪ್ರಾಣಿಕಥೆಗಳು, ಬುದ್ಧಿವಂತಿಕೆ ಕಥೆಗಳು – ಎಲ್ಲವೂ ಇಲ್ಲಿವೆ. ಗಾದೆಗಳ ಹಿನ್ನೆಲೆಯಲ್ಲಿರುವ ಅಪೂರ್ವ ಕಥೆಗಳು ಇಲ್ಲಿ ಬೆಳಕು ಕಂಡಿವೆ. ಸಂಪಾದಕರಾದ ರಾಜಶೇಖರ ಅವರು ಗಾದೆಗೆ ಸಂಬಂಧಿಸಿದ ಕಥೆಯನ್ನು ಕೊಡುವಾಗ ಆ ಗಾದೆಯನ್ನು ಬಳಸುವ ಸಂದರ್ಭ, ಅದಕ್ಕಿರುವ ವಿವಿಧ ಅರ್ಥಛಾಯೆಗಳು ಮತ್ತು ಸಂವಾದಿ ಗಾದೆಗಳನ್ನು ಕೊಟ್ಟಿರುವುದರಿಂದ ಇದರ ಉಪಯುಕ್ತತೆ ಹೆಚ್ಚಾಗಿದೆ. ಗಾದೆಕಥೆಗಳು ಸೃಷ್ಟಿಯಾಗುವ ಸಂದರ್ಭಗಳನ್ನು ಇಲ್ಲಿ ತಿಳಿಸಲಾಗಿದ್ದು ಸಂಸ್ಕೃತಿ ಅಧ್ಯಯನಕ್ಕೆ ಇದು ಅನುಕೂಲಕರವಾಗಿದೆ. ಕನ್ನಡದಲ್ಲಿ ಈ ಹಿಂದೆಯೆ ಶ್ರೀ. ಕೆ. ಕೃಷ್ಣಪ್ಪರೆಡ್ಡಿ, ಡಾ.ಎಲ್.ಆರ್.ಹೆಗ್ಗಡೆ, ಆರ್.ಶ್ರೀಮತಿ, ಶ್ರೀ ಜೀನಹಳ್ಳಿ ಸಿದ್ದಲಿಂಗಪ್ಪ, ಪ್ರೊ.ಬೆ.ಗೋ.ರಮೇಶ್ ಮತ್ತು ನಾಗಲಕ್ಷ್ಮಿಯವರು ಜನಪದ ಗಾದೆ ಕಥೆಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಆದರೆ ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ ಈ ಕೃತಿ ಒಂದು ದೊಡ್ಡ ಪ್ರಯತ್ನವಾಗಿದ್ದು, ಅಪಾರ ಶ್ರಮ, ಶ್ರದ್ಧೆ ಮತ್ತು ವಿದ್ವತ್ತುಗಳಿಂದ ಮೂಡಿದ್ದು ಹೆಚ್ಚು ಸಮಗ್ರ ಎನಿಸಿದೆ.

ಜನಪದ ಗಾದೆಗಳಿಗೆ ಸಂಬಂಧಿಸಿದ ಎರಡು ಕೃತಿಗಳನ್ನು ಪಿ.ಕೆ.

ಆರ್.ಹೊರತಂದಿದ್ದಾರೆ. 'ಮುತ್ತಿನ ಕಣಜ' ಮತ್ತು 'ಭೂಮಿ ತೂಕದ ಮಾತು' ಎಂಬೆರೆಡು ಗಾದೆ ಸಂಕಲನಗಳನ್ನು ಪಿ.ಕೆ.ಆರ್. ಸಂಪಾದಿಸಿ ಪ್ರಕಟಿಸಿದ್ದಾರೆ. 'ಮುತ್ತಿನ ಕಣಜ' ಸಂಕಲನದಲ್ಲಿ ಒಟ್ಟು ಒಂದು ಸಾವಿರದ ಇನ್ನೂರ ಮೂವತ್ತು ಗಾದೆಗಳಿವೆ. ಜೊತೆಗೆ ಹದಿನಾಲ್ಕು ಗಾದೆ ಕಥೆಗಳಿವೆ. 'ಭೂಮಿ ತೂಕದ ಮಾತು' ಕೃತಿಯಲ್ಲಿ ಒಟ್ಟು ೧೫೦೧ ಗಾದೆಗಳು ಸಂಕಲಿತವಾಗಿವೆ.

'ಭೂಮಿ ತೂಕದ ಮಾತು' ಒಂದು ವಿಶಿಷ್ಟವಾದ ಸಂಕಲನವಾಗಿದೆ. ಸಾಂಪ್ರದಾಯಿಕ ಮಡಿವಂತಿಕೆ ಕಾರಣವಾಗಿ ಇದುವರೆಗಿನ ಗಾದೆಗಳ ಸಂಕಲನದಲ್ಲಿ ಸೇರ್ಪಡೆಗೊಳ್ಳದಿರುವ ಅನೇಕ ಗಾದೆಗಳು ಇಲ್ಲಿ ಸಂಕಲನಗೊಂಡಿರುವುದು ವಿಶೇಷವಾಗಿದೆ. ಸಂಗ್ರಹ ಕಾರ್ಯದ ಸಂದರ್ಭದಲ್ಲಿ ವಕ್ತೃವಿನೊಡನೆ ಆತ್ಮೀಯತೆಯನ್ನು ಸಾಧಿಸಲಾಗದೆ ಹೋದುದರಿಂದ ಕೆಲವು ವಿಶಿಷ್ಟ ಸ್ವರೂಪದ ಗಾದೆಗಳನ್ನು ಅನೇಕ ಸಂಪಾದನಾಕಾರರು ಸಂಗ್ರಹಮಾಡದೆ ಬಿಟ್ಟಿದ್ದಾರೆ. ಇದರಿಂದಾಗಿ ಗಾದೆಗಳಿಗೆ ಸಂಬಂಧಿಸಿದಂತೆ ಸಂಪಾದನಾ ನೆಲೆಯಲ್ಲಿ ಪೂರ್ಣತೆಯ ಕಡೆಗೆ ಸಾಗಿದಂತಾಗಿರಲಿಲ್ಲ. ಆದರೆ ಪಿ.ಕೆ.ರಾಜಶೇಖರ ಅವರು ಪ್ರಾಥಮಿಕ ನೆಲೆಯಲ್ಲಿ ಅಪ್ಪಟ 'ಜನಪದ ಜೀವಿ'ಯಾಗಿರುವುದರಿಂದ ವಕ್ತೃವಿನಲ್ಲಿ ಸಂಕೋಚ ಪ್ರವೃತ್ತಿಯನ್ನು ಮೂಡಿಸದೆ 'ಅಂತಹ' ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಶಿಷ್ಟ ಸಮುದಾಯ 'ಅಶ್ಲೀಲ' ಎಂದು ಸಾಮಾನ್ಯವಾಗಿ ಕರೆಯಬಹುದಾದ ಪದಗಳು ಇಲ್ಲಿ ಹೆಚ್ಚಿನ ಗಾದೆಗಳಲ್ಲಿ ಬಳಕೆಗೊಂಡಿವೆ. ಈ ಕಾರಣದಿಂದಾಗಿಯೇ ಜನಪದ ಬದುಕಿನಲ್ಲಿ ಜೀವಂತವಾಗಿರುವ ಇಂತಹ ಗಾದೆಗಳು ಸಂಗ್ರಹಗೊಳ್ಳಲಿಲ್ಲ; ಜನಪದ ಸಂಸ್ಕೃತಿಯ ಸೂಕ್ಷ್ಮ ಅಧ್ಯಯನಕ್ಕೆ ಪೂರಕ ಸಾಮಗ್ರಿ ಲಭ್ಯವಾಗುವಂತಾಗಿರಲಿಲ್ಲ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಶಿಷ್ಟ ಸಂಸ್ಕೃತಿ ಮತ್ತು ಜನಪದ ಸಂಸ್ಕೃತಿಗಳು ಆದಿಯಿಂದಲೂ ಒಟ್ಟೊಟ್ಟಿಗೆ ಬದುಕುತ್ತಲೇ ಬಂದಿದೆ. ಜನಪದ ಸಂಸ್ಕೃತಿ ಅಲ್ಲಲ್ಲಿ ಅಷ್ಟಿಷ್ಟು ಶಿಷ್ಟ ಪ್ರಭಾವಕ್ಕೆ ಒಳಗಾಗಿದ್ದರೂ

ತನ್ನ ಅಂತಃಸತ್ವವನ್ನು ಬಿಟ್ಟು ಕೊಡದೆ ಶಿಷ್ಟಕ್ಕೆ ಪ್ರಬಲ ಸವಾಲುಗಳನ್ನು ನೀಡುತ್ತಲೇ ಬಂದಿದೆ. ಜನಪದ ಸಂಸ್ಕೃತಿಯ ಅನನ್ಯತೆಯಲ್ಲಿ ಅದು 'ಅಶ್ಲೀಲ' ಎನ್ನಬಹುದಾದ ಪದ ಅಥವಾ ಪದಪುಂಜವನ್ನು ಯಾವುದೇ ಮುಲಾಜುಗಳಿಲ್ಲದೆ ಬಳಸುವುದು ಒಂದು. ಇದಕ್ಕೆ ಮೂಲ ಕಾರಣ ಶಿಷ್ಟರಿಗೆ ಅಶ್ಲೀಲದಂತೆ ತೋರುವುದು ಜನಪದರಿಗೆ ಅಶ್ಲೀಲದಂತೆ ತೋರದಿರುವುದೇ ಆಗಿದೆ. ಜನಪದ ಸಂಸ್ಕೃತಿಯಲ್ಲಿ ಅಶ್ಲೀಲ ಎನ್ನುವುದು ಮಾತಿನಲ್ಲಿರುವುದಿಲ್ಲ; ಅದು ನಡತೆಯಲ್ಲಿರುತ್ತದೆ. ಜನಪದ ಸಂಸ್ಕೃತಿ ಕಾಮ ಮತ್ತು ಕಾಮ ಸಂಬಂಧಿಯಾದ ವರ್ತನೆ ಮತ್ತು ಅಭಿವ್ಯಕ್ತಿ ಪದ ಸಮೂಹಗಳನ್ನು ಸಹಜ ವ್ಯಾಪಾರಗಳಂತೆ ಭಾವಿಸುತ್ತದೆ; ಅಂತೆಯೆ ಅಂತಹ ಪದಗಳನ್ನು ನಿರ್ಭಿಡೆಯಿಂದ ಬಳಸುತ್ತದೆ. ಸಂಸ್ಕೃತಿಯೊಂದರ ಅಧ್ಯಯನದ ಪೂರ್ಣತೆ ಅದರ ಯಾವುದೋ ಒಂದು ಪ್ರಮುಖ ಘಟಕವನ್ನು ನಿರ್ಲಕ್ಷಿಸಿ ಸಾಧಿಸುವಂಥದ್ದಲ್ಲ. ಈ ದಿಸೆಯಲ್ಲಿ ಡಾ.ಪಿ.ಕೆ. ರಾಜಶೇಖರ ಅವರು ಸಂಪಾದಿಸಿರುವ ಈ ಗ್ರಂಥ ಜನಪದ ಸಂಸ್ಕೃತಿಯ ಸಾಮಾಜಿಕ ಮತ್ತು ಭಾಷಿಕ ಕಾರಣಗಳಿಂದ ಉತ್ತಮ ಅಧ್ಯಯನ ಯೋಗ್ಯ ಕೃತಿಯಾಗಿದೆ. 'ಭೂಮಿ ತೂಕದ ಮಾತು' ಕೃತಿಯನ್ನು ವಿದ್ವಾಂಸರು 'ಕನ್ನಡ ಗಾದೆಗಳ ಸಂಕಲನ ಕ್ಷೇತ್ರದಲ್ಲಿ ಒಂದು ಮಹತ್ತರ ಮೈಲಿಗಲ್ಲು' ಎಂದು ಪ್ರಶಂಸಿಸಿದ್ದಾರೆ.

ಡಾ.ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ ಇದೇ ಬಗೆಯ ಇನ್ನೊಂದು ವಿಶಿಷ್ಟ ಕೃತಿಯನ್ನು ಕುರಿತು ಇಲ್ಲಿಯೇ ಪ್ರಸ್ತಾಪಿಸಬಹುದು. ಜನಪದದಲ್ಲಿರುವ ವಿನೋದ ಪ್ರಸಂಗಗಳನ್ನು ಒಳಗೊಂಡಿರುವ 'ಜನಪದ ಜೋಕುಗಳು' ಎಂಬ ಗ್ರಂಥವನ್ನು ಪಿ.ಕೆ.ಆರ್. ಪ್ರಕಟಿಸಿದ್ದಾರೆ. ಪ್ರಾಸಪದ್ಯಗಳು, ಗೀತೆಗೆಳು, ಕಿಲಿಲಿಯೋ ಪದಗಳು, ಸಂಭಾಷಣೆಗಳು, ಹನ್ಸಗಳು, ಗಾದೆ, ಒಗಟು ಹಾಗೂ ಬೈಗುಳಗಳಲ್ಲಿ ಅಭಿವ್ಯಕ್ತಗೊಂಡಿರುವ ಹಾಸ್ಯ ಪ್ರಸಂಗಗಳನ್ನು ಇಲ್ಲಿ ದಾಖಲಿಸಿ ಸಲ್ಲಿಸಲಾಗಿದೆ. ಕನ್ನಡ ಜಾನಪದದಲ್ಲಿರುವ ನಗೆ ಹನಿಗಳ ಹೊತ್ತ ಮೊದಲ ಸಂಕಲನ ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ. ಗ್ರಾಮೀಣ ಬದುಕಿನಲ್ಲಿ ಹಾಸ್ಯ ಹಾಸು ಹೊಕ್ಕಾಗಿರುತ್ತದೆ. 'ಬದುಕನ್ನು ಸಹಿಸಬೇಕು, ಬಾಳನ್ನು ಸವಿಯಬೇಕು'

ಎಂಬ ಧೋರಣೆ ಇರುವಲ್ಲಿ ಇದು ಸಹಜ. 'ನಗು ಎಲ್ಲಿದೆಯೋ ಅಲ್ಲಿದೆ ಆರೋಗ್ಯ' ಎಂಬ ಹೇಳಿಕೆ ಜನಪದರಲ್ಲಿ ಜೀವನಕ್ರಮವೇ ಆಗಿದೆ. ಹಾಗಾಗಿ ಜನಪದರಲ್ಲಿ ಸಾಕಷ್ಟು ಜೋಕುಗಳಿವೆ; ಅವು ನಿತ್ಯವೂ ಅವರ ಜೀವನ ವಿಧಾನದ ಒಳಗೇ ಸೃಷ್ಟಿಗೊಳ್ಳುತ್ತಿರುತ್ತವೆ. ಇಂತಹ ಚೇತೋಹಾರಿಯಾದ ಜನಪದ ಜೋಕುಗಳು ಜನಪದ ವಿದ್ವಾಂಸರು ಹಾಗೂ ಸಂಪಾದನಾಕಾರರಿಗೆ ಬಹುಕಾಲದವರೆಗೆ ಸಂಗ್ರಹಯೋಗ್ಯ ಎನಿಸದಿದ್ದುದು ಆಶ್ಚರ್ಯಕರ ಸಂಗತಿಯಾಗಿದೆ. ಇವುಗಳಿಗೆ ಸಂಬಂಧಿಸಿದ ಕೃತಿಯನ್ನು ಪ್ರಪ್ರಥಮ ಬಾರಿಗೆ ಹೊರತರುವ ಮೂಲಕ ರಾಜಶೇಖರ್ ಆ ಕೊರತೆಯನ್ನು ತುಂಬಿಸಿದ್ದಾರೆ. ಮುಂದಿನ ಸಂಗ್ರಹಕಾರರಿಗೆ ಮಾರ್ಗದರ್ಶನ ಮಾಡಿದ್ದಾರೆ.

'ಜನಪದ ಜೋಕುಗಳು' ಹಾಸ್ಯ ಪ್ರಧಾನವಾದ ಒಂದು ಸಂಕೀರ್ಣ ಕೃತಿ. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿರುವ ಹಾಸ್ಯ ಪ್ರಸಂಗಗಳು ಇಲ್ಲಿ ಸಂಕಲನಗೊಂಡಿವೆ. 'ಭೂಮಿ ತೂಕದ ಮಾತು' ಕೃತಿಗೆ ಸಂಬಂಧಿಸಿದಂತೆ ಹೇಳಲಾದ ಮಾತುಗಳನ್ನು ಇಲ್ಲಿಯೂ ಮತ್ತೆ ಹೇಳಬೇಕಾಗಿದೆ. ಮಡಿ ಚಿಂತನೆಯಿಂದ ಬಿಡಿಸಿಕೊಂಡು ಸಾಚಾ ಆದುದನ್ನು ಸಹಜವಾಗಿ ಜನರಿಗೆ ಮುಟ್ಟಿಸಬೇಕೆಂಬ ಧೋರಣೆ ಇಲ್ಲಿಯೂ ಕಂಡು ಬರುತ್ತದೆ. ಜನಸಾಮಾನ್ಯರ ಆಪ್ತ ಮತ್ತು ಅಂತರಂಗದ ಸಾಹಿತ್ಯದಲ್ಲಿ 'ಅಶ್ಲೀಲ' ಎಂದು ಶಿಷ್ಟ ಸಮುದಾಯ ಗುರುತಿಸುವಂಥದ್ದು ಇದ್ದೇ ಇರುತ್ತದೆ. ಜಾನಪದ ವಿದ್ವಾಂಸ ಸಂಸ್ಕೃತೀಕರಣಗೊಂಡರೆ, ತನ್ಮೂಲಕ ಇಂಥವುಗಳ ಸಂಗ್ರಹ, ಪ್ರಕಟಣೆ, ಅಧ್ಯಯನಗಳಿಂದ ದೂರಾದರೆ ನೈಜ ಜನಪದ ಸಂಸ್ಕೃತಿಯನ್ನು ಕಟ್ಟಿಕೊಡಲಾರ. ಆದರೆ ಪಿ.ಕೆ.ಆರ್. ಈ ಬಗೆಯ ಸಾಂಸ್ಕೃತಿಕ ಮತ್ತು ಆಧುನಿಕ ಸೂತಕದಿಂದ ಬಿಡಿಸಿಕೊಂಡು ನಿಜವಾದ 'ಜಾನಪದ ತಜ್ಞ'ರಾಗಿರುವುದರಿಂದ ಇಂಥ ಕೃತಿಯನ್ನು ಪ್ರಕಟಿಸಲು ಸಾಧ್ಯವಾಗಿದೆ. ಇಲ್ಲಿನ ಜೋಕುಗಳು ಮೇಲು ಓದಿಗೆ ಸಹೃದಯನನ್ನು ಮುದಗೊಳಿಸುತ್ತವೆ. ವಿನೋದಗೊಳಿಸುತ್ತವೆ. ಆದರೆ ಅಷ್ಟಕ್ಕೇ ವಿರಮಿಸದೆ ಮನುಷ್ಯನ ಜೀವನವನ್ನು ಪುನಸ್ಸೃಷ್ಟಿಸಿ ಜೀವನೋತ್ಸಾಹವನ್ನು ತುಂಬುತ್ತದೆ. ಈ ಸಂಕಲನದಲ್ಲಿನ ಹೆಚ್ಚಿನ ವಿನೋದ

ಪ್ರಸಂಗಗಳು ಸೆಕ್ಸ್ ಕೇಂದ್ರಿತವಾದವುಗಳು. ಆದರೆ ಅವು ಜೀವನವನ್ನು ಪುನಶ್ಚೇತನಗೊಳಿಸುವುದರಿಂದ ಅಪೇಕ್ಷಣೀಯವಾದವುಗಳೇ ಆಗುತ್ತವೆ. ಹಾಗಾಗಿ ವಿದ್ವಾಂಸರು ಗುರುತಿಸಿರುವಂತೆ ಈ ಕೃತಿ ಪ್ರಕಟಣೆ ಒಂದು ಸವಾಲಿನ ಸಾಹಸವಾಗಿದೆ. ಇಂತಹ ಸವಾಲುಗಳನ್ನು ಡಾ.ಪಿ.ಕೆ. ರಾಜಶೇಖರ ಸದಾ ಆಹ್ವಾನಿಸುತ್ತಾರೆ; ಯಶಸ್ವಿಯಾಗಿ ನಿಭಾಯಿಸಿ ವಿಜಯ ಸಾಧಿಸುತ್ತಾರೆ. ಇದಕ್ಕೆ ಇವರ ಅನೇಕ ಕೃತಿಗಳು ಸಾಕ್ಷಿಯಾಗಿವೆ.

ಮೂಲ ಜನಪದ ಕಲಾವಿದರೊಡನೆ ಪಿ.ಕೆ.ರಾಜಶೇಖರ ಅವರಂತೆ ತಾದಾತ್ಮ್ಯ ಸಾಧಿಸಿದ ವಿದ್ವಾಂಸರು ಕನ್ನಡದಲ್ಲಿ ಅತಿವಿರಳ ಎನ್ನಬಹುದು. ಈ ವಿಶಿಷ್ಟ ಗುಣದಿಂದಾಗಿಯೇ ಇವರಿಗೆ ಜಾನಪದಕ್ಕೆ ಸಂಬಂಧಿಸಿದ ಹೆಚ್ಚಿನದನ್ನು ದಕ್ಕಿಸಿಕೊಳ್ಳಲು ಸಾಧ್ಯವಾಗಿದೆ. ಜನಪದ ಸಂಗೀತ ಮತ್ತು ಜನಪದ ವಾದ್ಯಗಳಿಗೆ ಅವಿನಾಭಾವ ಸಂಬಂಧವಿದೆ. ಜನಪದ ಕಾವ್ಯವನ್ನು ಕುರಿತಾದ ಅಧ್ಯಯನ, ಅವುಗಳ ಸೃಷ್ಟಿ ಮತ್ತು ವಿಕಾಸದಲ್ಲಿ ಅಂತಃಶಕ್ತಿಯಾಗಿ ಕೆಲಸ ಮಾಡುವ ವಾದ್ಯ ಪರಿಕರಗಳ ಶೂನ್ಯ ಅರಿವಿನಿಂದ ಸಂಪೂರ್ಣವಾಗುವುದಿಲ್ಲ. ಪಿ.ಕೆ.ಆರ್. ಶ್ರೇಷ್ಠ ಜನಪದ ಗಾಯಕರಾಗಿರುವುದರಿಂದ ಜನಪದ ವಾದ್ಯಗಳ ಬಗ್ಗೆ ಸಹಜ ಕುತೂಹಲ ತಾಳಿ, ಅಂತಹ ವಾದ್ಯವಿಶೇಷಗಳನ್ನು ಕುರಿತು ಸಂಶೋಧನೆ ನಡೆಸಿ ಅಗತ್ಯ ಕೃತಿಯೊಂದನ್ನು ಹೊರತಂದಿದ್ದಾರೆ. ಅದೇ 'ನಮ್ಮ ಜನಪ್ಪದ ವಾದ್ಯಗಳು' ಪುಸ್ತಕ. ಈ ಗ್ರಂಥ ಕಿರಿಯರ ಪುಸ್ತಕ ಮಾಲೆಯಲ್ಲಿ ಪ್ರಕಟಗೊಂಡಿದ್ದರೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಜನಪದ ಸಂಗೀತಾಸಕ್ತರಿಗೆಲ್ಲ ಒಂದು ಬಲುಮುಖ್ಯ ಪರಾಮರ್ಶನ ಗ್ರಂಥವಾಗಿ ಇದು ತನ್ನ ಅನನ್ಯತೆಯನ್ನು ಸ್ಥಾಪಿಸಿಕೊಂಡಿದೆ.

ಜನಪದ ವಾದ್ಯಗಳು ಪರಂಪರಾನುಗತವಾಗಿ ರೂಪುಗೊಂಡ ಬಗೆ, ಅವುಗಳ ವರ್ಗೀಕರಣ, ಸ್ವರೂಪ–ವಿನ್ಯಾಸ, ಬಳಕೆಗೊಳ್ಳುವ ಸಂದರ್ಭ, ಒಂದು ನಿರ್ದಿಷ್ಟ ಕಾವ್ಯ ಗಾಯನದಲ್ಲಿ ಅದರ ಮಹತ್ವ ಇತ್ಯಾದಿ ವಿಚಾರಗಳನ್ನು ಇಲ್ಲಿ ಗಂಭೀರವಾಗಿ ಪ್ರಸ್ತಾಪಿಸಲಾಗಿದೆ. ಚರ್ಮವಾದ್ಯ, ತಂತೀವಾದ್ಯ, ಸುಷಿರವಾದ್ಯ, ಘನವಾದ್ಯ ಇತ್ಯಾದಿ

ವರ್ಗೀಕರಣದ ಅಡಿಯಲ್ಲಿ ಪ್ರಮುಖ ಕನ್ನಡ ಜನಪದ ವಾದ್ಯಗಳನ್ನೆಲ್ಲ ಇಲ್ಲಿ ಪರಿಚಯಿಸಲಾಗಿದೆ.

ಜನಪದ ವಾದ್ಯಗಳಿಗೆ ಹಿನ್ನೆಲೆಯಾಗಿ ಜನಪದ ಸಂಗೀತ ಹುಟ್ಟುಪಡೆದಿರುವ ಬಗೆಯನ್ನು ವಿವರಿಸುವ ಭಾಗ ಇಲ್ಲಿ ಕುತೂಹಲಕಾರಿಯಾಗಿದೆ. ಜನಪದ ಸಂಗೀತದ (ಯಾವುದೇ ಸಂಗೀತದ) ಪ್ರಾಥಮಿಕ ಪರಿಭಾಷೆಗಳಾದ ಶಬ್ದ, ರಾಗ, ತಾಳ– ಇವುಗಳ ಸೂಕ್ಷ್ಮ ಸ್ವರೂಪವನ್ನು ಪಿ.ಕೆ.ಆರ್.ಸುಲಲಿತವಾಗಿ ತಿಳಿಸಿಕೊಟ್ಟಿದ್ದಾರೆ. ಜನಪದರು ತಮ್ಮ ಅಗತ್ಯವಾದ್ಯಗಳನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕಾಗಿ ಬಳಸುತ್ತಿದ್ದ ವಸ್ತು ವಿಶೇಷಗಳ ವಿವರಣೆ ಇಲ್ಲಿ ಸೊಗಸಾಗಿ ಮೂಡಿ ಬಂದಿದೆ. ಸುಮಾರು ೧೫೦ಕ್ಕೂ ಹೆಚ್ಚಿನ ವಾದ್ಯ ವಿಶೇಷಗಳನ್ನು ಇಲ್ಲಿ ಪರಿಚಯಿಸಿರುವುದು ವಿಶೇಷವಾಗಿದೆ. ಕೆಲವು ವಾದ್ಯಗಳ ರಚನೆಯ ಹಿನ್ನೆಲೆಯಲ್ಲಿರುವ ಪೌರಾಣಿಕ ಕಥೆಗಳ ಪ್ರಸ್ತಾಪ ಇಲ್ಲಿ ಕಂಡು ಬರುತ್ತದೆ. ಡೊಳ್ಳು, ಬುಡಬುಡಿಕೆ, ಚೌಡಿಕೆ ವಾದ್ಯಗಳ ಸೃಷ್ಟಿಗೆ ಕಾರಣವಾದ ಪೌರಾಣಿಕ ಸಂದರ್ಭಗಳ ವಿಶ್ಲೇಷಣೆ ಈ ಕೃತಿಗೆ ಹೊಸತನವೊಂದನ್ನು ದೊರಕಿಸಿಕೊಟ್ಟಿದೆ. ವಾದ್ಯಗಳು ಮತ್ತು ಸಂಸ್ಕೃತಿಯ ನಡುವಿನ ಅವಿನಾಭಾವ ಸಂಬಂಧ ಹಾಗೂ ಜನಪದರು ತಮ್ಮ ವಾದ್ಯ ಪರಿಕರಗಳನ್ನು ಪ್ರೀತಿಸುವ, ಗೌರವಿಸುವ ಬಗೆಯನ್ನು ಇದು ಸೂಚಿಸುತ್ತದೆ. ಕನ್ನಡದಲ್ಲಿ ಪ್ರಕಟಗೊಂಡ ಜನಪದ ವಾದ್ಯಗಳನ್ನು ಕುರಿತ ಮೊಟ್ಟಮೊದಲ ಗ್ರಂಥ ಎಂಬ ಹೆಗ್ಗಳಿಕೆಗೆ ಈ ಕೃತಿ ಭಾಜನವಾಗಿದೆ.

'ನಂಜುಂಡ–ಚಾಮುಂಡಿ' ಮತ್ತು 'ಚಾಮುಂಡಿ ಸಿರಿ ಚಾಮುಂಡಿ' ಕೃತಿಗಳು ಜನಪ್ರಿಯ ಜನಪದ ಕಾವ್ಯ. 'ಬೆಟ್ಟದ ಚಾಮುಂಡಿ'ಯ ಗದ್ಯ ರೂಪಗಳಾಗಿವೆ. ಆದರೆ ಸ್ವರೂಪದಲ್ಲಿ ಭಿನ್ನವಾಗಿವೆ. 'ನಂಜುಂಡ–ಚಾಮುಂಡಿ'ಕೃತಿಯಲ್ಲಿ ಬೆಟ್ಟದ ಚಾಮುಂಡಿಯ ಕಥೆಯನ್ನು ನವ ಸಾಕ್ಷರರಿಗಾಗಿ ಸರಳವಾದ ಕನ್ನಡದಲ್ಲಿ ನಿರೂಪಿಸಲಾಗಿದೆ. 'ಚಾಮುಂಡಿ ಸಿರಿ ಚಾಮುಂಡಿ' ಅದೇ ಕಾವ್ಯದ ಸುಂದರ ವಚನ ರೂಪವಾಗಿದೆ.

ಬಾನುಲಿ ಪ್ರಸಾರಕ್ಕಾಗಿ ಸಿದ್ಧಪಡಿಸಲಾದ ರೂಪವನ್ನು ಇಲ್ಲಿ ಗ್ರಂಥ ರೂಪದಲ್ಲಿ ಸಹೃದಯರಿಗೆ ಒಪ್ಪಿಸಲಾಗಿದೆ., ಕಾವ್ಯಾಧ್ಯಯನದ ಮೂಲಕ 'ಬೆಟ್ಟದ ಚಾಮುಂಡಿ'ಯನ್ನು ಪರಿಚಯಿಸಿಕೊಳ್ಳಲಾಗದ ಸಹೃದಯರಿಗಾಗಿ ಸಿದ್ಧಪಡಿಸಲಾದ ಈ ಕೃತಿ ತನ್ನ ಉದ್ದೇಶವನ್ನು ಮೀರಿ ಸಾರ್ಥಕ್ಯ ಪಡೆದಿದೆ. ಇದು ಕಾವ್ಯ ವಚನರೂಪವಾದರೂ ನೀರಸಗದ್ಯ ಹಾಗೂ ಆಕರ್ಷಣೆ ರಹಿತ ನಿರೂಪಣೆಯಾಗದೆ ಕಾದಂಬರಿವೊಂದರ ಓದಿನ ಅನುಭವವನ್ನು ತಂದುಕೊಡುತ್ತದೆ.

ಮಕ್ಕಳಿಗಾಗಿಯೂ ಬರೆಯುವ ಹೊಣೆಗಾರಿಕೆಯನ್ನು ದೊಡ್ಡ ಸಾಹಿತಿಗಳು ನಿಭಾಯಿಸಬೇಕಾಗುತ್ತದೆ. 'ಮಕ್ಕಳಿಗಾಗಿ ಬರೆಯುವದೆಂದರೆ ಸಾಹಿತಿಯಾಗಿ ತನ್ನನ್ನು ಕುಬ್ಜಗೊಳಿಸಿಕೊಂಡಂತೆ ಎಂಬ ಭಾವನೆ ಕೆಲವರಲ್ಲಿ ಇರಬಹುದು. ಆದರೆ ಇದು ಅವೈಜ್ಞಾನಿಕವಾದುದು; ಮುಂಗಾಣ್ಕೆ ಕೊರತೆಯ ಅಲ್ಪ ದೃಷ್ಟಿಯದು. ಈ ವಿಷಯವನ್ನು ಪ್ರಸ್ತಾಪಿಸಿದ ಕಾರಣವಿಷ್ಟೆ; ವಿದ್ವತ್ ಲೋಕ ನಿಬ್ಬೆರಗಾಗುವ, ವಿಮರ್ಶಾಜಗತ್ತು ಹಲವು ವಿಶಿಷ್ಟ ಆಯಮಗಳ ಅಧ್ಯಯನ-ವಿಶ್ಲೇಷಣೆಗೆ ಒಳಪಡಿಸುವ ಸಾಧ್ಯತೆಗಳಿರುವ ಬೃಹತ್ ಕೃತಿಗಳನ್ನು ಸಂಪಾದಿಸಿಕೊಟ್ಟಂತೆ ರಾಜಶೇಖರ ಅವರು ಮಕ್ಕಳಿಗಾಗಿಯೂ ಪುಸ್ತಕಗಳನ್ನು ಬರೆದಿದ್ದಾರೆ. ಜನಪದ ಸಾಹಿತ್ಯದಲ್ಲಿ ಮಕ್ಕಳನ್ನು ಉದ್ದಿಷ್ಟವಾಗಿರಿಸಿಕೊಂಡು ಸೃಜಿಸಲಾದವುಗಳು ಅಪಾರ ಸಂಖ್ಯೆಯಲ್ಲಿಯೇ ಇವೆ. ಅಂಥವುಗಳನ್ನು ಮತ್ತೆ ಮಕ್ಕಳಿಗೆ ಮುಟ್ಟಿಸುವುದು ಉದ್ದೇಶ ಸಾರ್ಥಕ್ಯದ ಕಾರ್ಯವೇ ಅಗುತ್ತದೆ. ಇಂತಹ ಹಲವು ಕೃತಿಗಳನ್ನು ರಚಿಸಿರುವುದು ವಿಶೇಷವಾಗಿದೆ. 'ಅಪೂರ್ವ ರತ್ನ', 'ಒಳ್ಳೆಯ ಮಾತಿಗೆ ಕಣ್ಣೀರೆ ಬಹುಮಾನ', 'ಚಿನ್ನದ ತುಪ್ಪಳು', 'ತಿಳಿದು ಮಾಡಿದ್ದು ತಿಳಿಯದೆ ಮಾಡಿದ್ದು', 'ದುಡಿದವನ ದುಡ್ಡಿನ ಬೆಲೆ', 'ನಾನು ಸುಳ್ಳು ಹೇಳುವುದಿಲ್ಲ' ಇತ್ಯಾದಿ ಹೊತ್ತಿಗೆಗಳು ಈ ಬಗೆಯವು. ಸರಳವಾದ ಭಾಷೆ ಸುಲಭವಾದ ಶೈಲಿ ಈ ಪುಸ್ತಕಗಳ ಲಕ್ಷಣಗಳಾಗಿವೆ. ಜೊತೆಗೆ ಆಕರ್ಷಕವಾದ ರೇಖಾ ಚಿತ್ರಗಳೂ ಇಲ್ಲಿದ್ದು ಮಕ್ಕಳ ಓದಿಗೆ ವಿಶೇಷ ಆಕರ್ಷಣೆಯನ್ನುಂಟು ಮಾಡುತ್ತವೆ.

ಡಾ.ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ ಮತ್ತೊಂದು ಮಹತ್ವದ ಕಾವ್ಯವೆಂದರೆ, ನಂಜನಗೂಡು ವೀರಭದ್ರ ವಿರಚಿತ ಪಾರ್ಥನ ಜೋಗಿ ಹಾಡು. ಇದು ಅಕ್ಷರಸ್ಥ ಜನಪದ ಕವಿ ಕಟ್ಟಿದ ಹಾಡುಗಬ್ಬವಾಗಿದ್ದು ತನ್ನ ವಿಶಿಷ್ಟ ಗೇಯ ಗುಣದಿಂದ ಸಹೃದಯಾಕರ್ಷಕವಾಗಿದೆ. ಇದು 'ಜೋಗಿ' ಹಾಡಾದರೂ ಶೃಂಗಾರ ರಸಭರಿತವಾಗಿದೆ. ಈ ಕಾವ್ಯದ ಮತ್ತೊಂದು ಗುಣ ಇದರ ನಾಟಕೀಯತೆ. ಅಚ್ಚುಕಟ್ಟಾದ ಪಾತ್ರಪೋಷಣೆ ಹಾಗೂ ಸೊಗಸಾದ ಸಂಭಾಷಣೆಗಳಿಂದ ಓದುಗನಿಗೆ ಒಂದು ವಿಶಿಷ್ಟಾನುಭವವನ್ನು ತಂದುಕೊಡುತ್ತದೆ. ಶೃಂಗಾರಪ್ರಧಾನವಾದರೂ ಇದು ಆ ವ್ಯಾಪ್ತಿಯನ್ನು ಮೀರಿ ಒಟ್ಟು ಮಾನವ ಸಮುದಾಯ ಒಂದು ಎಂದು ಸಾರುವುದು ವಿಶೇಷವಾಗಿದೆ.

ರಾಜಶೇಖರ ಅವರ ಜನಪದ ಕಾವ್ಯ ಸಂಪಾದನೆಯ ಅನನ್ಯತೆಯನ್ನು ಕುರಿತು ವಿಶೇಷವಾಗಿ ಪ್ರಸ್ತಾಪಿಸಬೇಕು. ಜನಪದ ಕವಿ ಹಾಡಿದ್ದನ್ನು ಯಥಾವತ್ತಾಗಿ ಅಕ್ಷರಕ್ಕಿಳಿಸಿ ಮುದ್ರಿಸಿ ಪ್ರಕಟಿಸುವುದು ಅವರ ಜಾಯಮಾನವಲ್ಲ. ಈ ಬಗೆಯ ಪ್ರಕಟಣೆ ಕೇವಲ ಪ್ರಾಥಮಿಕವಾದದ್ದು. ಕೇವಲ ಇಷ್ಟರಿಂದಲೇ ಒಬ್ಬ ಸಂಪಾದನಕಾರ ಕಾವ್ಯದ ಸಕಲವನ್ನೂ ಸಹೃದಯರಿಗೆ ಸಲ್ಲಿಸಿದಂತಾಗುವುದಿಲ್ಲ. ಒಂದು ಕಾವ್ಯದ ಸಮಗ್ರ ಸತ್ವ ಓದುಗನಿಗೆ ದಕ್ಕದೆ ಹೋದರೆ ಸಂಪಾದನೆ ಸಾರ್ಥಕವೆನಿಸುವುದಿಲ್ಲ. ಈ ಎಲ್ಲಾ ಮಹತ್ವದ ವಿಚಾರಗಳನ್ನು ಚೆನ್ನಾಗಿ ಅರಿತಿರುವ ಪಿ.ಕೆ. ಆರ್. ತಾವು ಸಂಪಾದಿಸುವ ಕಾವ್ಯವನ್ನು ಮೊದಲು ಸಮಗ್ರವಾಗಿ ಸಂಶೋಧಿಸಿ, ಅಧ್ಯಯನಕ್ಕೆ ಒಳಗುಮಾಡಿ ಅದರ ಒಟ್ಟು ಸ್ವರೂಪ ಓದುಗನಿಗೆ ದಕ್ಕುವಂತೆ ಪ್ರಕಟಿಸುತ್ತಾರೆ. ಪಿರಿಯಾಪಟ್ಟಣದ ಕಾಳಗ ಕೃತಿಯನ್ನು ಕುರಿತಂತೆ ಡಾ.ಎಂ.ಎಂ.ಕಲ್ಬುರ್ಗಿಯವರು 'ಮುನ್ನುಡಿಯಲ್ಲಿ ಸಂಶೋಧನ ಪ್ರಜ್ಞೆ ಸಂಕಲನದಲ್ಲಿ ಸಂಪಾದನಾ ಪ್ರಜ್ಞೆ ದಟ್ಟವಾಗಿ ನೆಲೆ ನಿಂತಿವೆ' ಎಂದಿರುವ ಮಾತನ್ನು ಪಿ.ಕೆ.ಆರ್. ಅವರು ಸಂಪಾದಿಸಿರುವ ಎಲ್ಲಾ ಕಾವ್ಯಗಳು ಧಾರಣೆ ಮಾಡಿಕೊಳ್ಳುತ್ತವೆ. ಬೇರೆ ಬೇರೆ ಪರಿಸರ ಮತ್ತು ಗಾಯಕರಿಂದ ಸೃಷ್ಟಿ ಪಡೆಯುವ ಜನಪದ ಕಾವ್ಯಗಳು ತಮ್ಮದೇ ಆದ ವಿಶಿಷ್ಟ ಸ್ವರೂಪದ ಭಾಷಾ ಸಂಪತ್ತಿಯನ್ನು ಹೊಂದಿರುತ್ತದೆ.

ಪ್ರಾದೇಶಿಕ ಭಿನ್ನತೆ–ಅನನ್ಯತೆ ಇರುವ ಅಸಂಖ್ಯಾತ ಪದಗಳು ಅಲ್ಲಿ 'ತಾವು' ಪಡೆದಿರುತ್ತವೆ. ಅಂತಹ ಪದಗಳ ಅರ್ಥದ 'ತಾಳು–ತುದಿ'ಯನ್ನು ಅರಿಯದೆ ಒಟ್ಟು ಕಾವ್ಯವನ್ನು ದಕ್ಕಿಸಿಕೊಳ್ಳಲಾಗುವುದಿಲ್ಲ.

ಹಳಗನ್ನಡ ಕಾವ್ಯಗಳಿಗೆಂತೋ ಅಂತೆಯೇ ಜನಪದ ಕಾವ್ಯಗಳೂ ಪುಸ್ತಕ ರೂಪದಲ್ಲಿ ಪ್ರಕಟಗೊಂಡಾಗ ಅಧಿಕೃತವಾದ ಶಬ್ದಕೋಶವೊಂದಿರಬೇಕಾಗುತ್ತದೆ. ಪಿ.ಕೆ.ಆರ್. ಅವರು ಹೊರ ತಂದಿರುವ ಎಲ್ಲಾ ಪುಸ್ತಕಗಳಲ್ಲಿಯೂ ಜನಪದ ಶಬ್ದಕೋಶವಿದ್ದು ಕಾವ್ಯಾಧ್ಯಯನಕ್ಕೆ ಪೂರಕವಾಗಿದೆ.

ಜಾನಪದಕ್ಕೆ ಸಂಬಂಧಿಸಿದಂತೆ ರಾಜಶೇಖರ ಅವರ ಪ್ರಧಾನ ಆಸಕ್ತಿ ಇರುವುದು ಗ್ರಂಥ ಸಂಪಾದನೆಯಲ್ಲೆ. ವಾಸ್ತವವಾಗಿ ಜಾನಪದದ ಅಧ್ಯಯನದಲ್ಲಿ ಜನಪದ ಕಾವ್ಯಗಳು 'ಅಸಲು' ಇದ್ದಂತೆ. ತತ್ವ, ಸಿದ್ಧಾಂತ, ವಿಮರ್ಶೆ, ವಿಶ್ಲೇಷಣೆ ಇತ್ಯಾದಿಗಳು ಅಸಲಿನ ಕಾರಣಕ್ಕಾಗಿ ದಕ್ಕುವ 'ಬಡ್ಡಿ'ಯಂತೆ. (ಇದು ಜಾನಪದ ವಿದ್ವಾಂಸರೊಬ್ಬರು ಹೇಳಿದ ಮಾತು). ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಪಿ.ಕೆ.ಆರ್ ಅವರ ಸಂಶೋಧನಾ ಕಾರ್ಯದ ಮಹತ್ವ ಅರಿವಾಗುತ್ತದೆ. ಕಾಲಪುರುಷ ಈಗಾಗಲೇ ಅದೆಷ್ಟೊ ಜನಪದ ಮಹಾಗಾಯಕರನ್ನು ಮುಕ್ಕಿ ಮುಗಿಸಿದ್ದಾನೆ; ಮುಕ್ಕಿ ಮುಗಿಸುತ್ತಲೂ ಇದ್ದಾನೆ. ಅಪಾರ ಕ್ಷೇತ್ರಕಾರ್ಯದ ಅನುಭವವಿರುವ ರಾಜಶೇಖರ ಅವರೇ ಹೇಳುವಂತೆ ಕನ್ನಡ ಜಾನಪದದಲ್ಲಿ ದಕ್ಕಿಸಿಕೊಂಡುದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚಾಗಿದೆ. ಹಾಗಾಗಿ ಪಿ.ಕೆ. ಆರ್.ಜನಪದ ಸಾಹಿತ್ಯ ಸಾಮಗ್ರಿಯನ್ನು ಸಂಪಾದಿಸಿದ್ದು, ಪ್ರಕಟಿಸಿದ್ದು ಬಹುದೊಡ್ಡ ಸಾಧನೆ ಎನಿಸುತ್ತದೆ. ಹಾಗೆಂದು ಇವರು ಜಾನಪದವನ್ನು ಕುರಿತು ವಿಶ್ಲೇಷಣೆ–ವಿಮರ್ಶೆ–ಮೌಲ್ಯಮಾಪನವನ್ನು ಕಡೆಗಣಿಸಲಿಲ್ಲ. ಇದಕ್ಕೆ 'ಜಾನಪದ ಸಂಭ್ರಮ' ಗ್ರಂಥ ಸಾಕ್ಷಿಯಾಗಿದೆ.

'ಜಾನಪದ ಸಂಭ್ರಮ' ಕೃತಿಯಲ್ಲಿ ಎರಡು ಭಾಗಗಳಿವೆ. 'ಜಾನಪದ ವಿವಿಧ' ಎಂಬ ಶೀರ್ಷಿಕೆಯ ಮೊದಲ ಭಾಗದಲ್ಲಿ ಹೆಸರಿಗೆ ತಕ್ಕಂತೆ ಜಾನಪದಕ್ಕೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳಿವೆ. ಜನಪದ

ಆಚರಣೆಗಳು, ಜನಪದ ಗಣಿತ ಪ್ರಪಂಚ, ಜನಪದ ಛಂದಸ್ಸು, ಜಾನಪದ ಮತ್ತು ಗೃಹ ವಿಜ್ಞಾನ, ಜಾನಪದ ಗ್ರಂಥ ಸಂಪಾದನೆ, ಜಾನಪದ ಲೋಕದೃಷ್ಟಿ, ಫಿನ್ಲೆಂಡಿನ ಜನಪದ ಮಹಾಕಾವ್ಯ ಕಲೇವಾಲ ಇತ್ಯಾದಿ ಹನ್ನೊಂದು ಲೇಖನಗಳಿದ್ದು ಪಿ.ಕೆ.ರಾಜಶೇಖರ ಅವರ ಜಾನಪದ ಅಧ್ಯಯನದ ವಿಸ್ತಾರಕ್ಕೆ ಇವು ಸಾಕ್ಷಿಗಳಾಗಿವೆ. ಕ್ಷೇತ್ರಕಾರ್ಯದಿಂದ ಲಭ್ಯವಾದ ಮೂಲನೆಲೆಯ ಸಾಚಾ ಆದ ಅರಿವು ಹಾಗೂ ದತ್ತ ಮಾಹಿತಿಯನ್ನು ಕ್ರಮಬದ್ಧವಾಗಿ ನಿರೂಪಿಸುವ ಸಂಶೋಧನಾ ಶಿಸ್ತು-ಇವುಗಳಿಂದ ಈ ಲೇಖನಗಳು ಹೆಚ್ಚು ಗಮನಾರ್ಹವೆನಿಸುತ್ತವೆ. ಈ ಪುಸ್ತಕದ ಎರಡನೆಯ ಭಾಗದಲ್ಲಿ ಜನಪದ ಕಲಾವಿದರನ್ನು ಕುರಿತ ಲೇಖನಗಳಿವೆ. ಜನಪದ ಸಾಹಿತ್ಯ ಮತ್ತು ಕಲೆಗಳ ಸೃಷ್ಟಿ, ಸಂರಕ್ಷಣೆ ಹಾಗೂ ಪ್ರಚಾರ ಕಾರ್ಯಗಳಲ್ಲಿ ಬಲುಮುಖ್ಯ ಪಾತ್ರ ವಹಿಸಿರುವ ಜನಪದ ಕಲಾವಿದರ-ವಿಶೇಷವಾಗಿ ವೃತ್ತಿ ಗಾಯಕರನ್ನು ಕುರಿತಾದ ವಿಶಿಷ್ಟ ಪ್ರಬಂಧಗಳು ಇಲ್ಲಿವೆ. ಚೌಡಿಕೆಯವರು, ನೀಲಗಾರರು, ದೇವರಗುಡ್ಡರು, ಗೊರವರು, ಗಣಿಯವರು, ದೊಂಬಿದಾಸರು, ತೆಲುಗು ಜಂಗಮರು, ಕರಪಾಲದವರು -ಇವರೇ ಮೊದಲಾದ ಒಟ್ಟು ಹದಿನಾರು ಬಗೆಯ ಜನಪದ ಗಾಯಕರನ್ನು ಇಲ್ಲಿ ಪರಿಚಯಿಸಲಾಗಿದೆ. ಇಲ್ಲಿನದು ಕೇವಲ ಸರಳ ಪರಿಚಯವಾಗಿರದೆ, ಸಂಬಂಧಪಟ್ಟ ಗಾಯಕರ ಭೌಗೋಳಿಕ ಪರಿಸರ, ಹಾಡುವ ಕಾವ್ಯಗಳ ಸ್ವರೂಪ, ನಿರ್ದಿಷ್ಟ ಕಾವ್ಯ ಸೃಷ್ಟಿಯ ಹಿನ್ನೆಲೆಯಲ್ಲಿರುವ ಪೌರಾಣಿಕ ಪರಿಸರ, ಬಳಸುವ ವಾದ್ಯ ಪರಿಕರಗಳ ಸ್ವರೂಪ, ವೈಶಿಷ್ಟ್ಯ ಇತ್ಯಾದಿ ಅಗತ್ಯ ವಿಚಾರಗಳ ಪ್ರಸ್ತಾಪವನ್ನೊಳಗೊಂಡಿದೆ. ಹಾಗಾಗಿ ಇದು ಈ ಬಗೆಯ ಕಲಾವಿದರು ಹಾಗೂ ಕಾವ್ಯಗಳನ್ನು ಕುರಿತು ಸಂಶೋಧನೆ ಮತ್ತು ಅಧ್ಯಯನ ಮಾಡುವ ಆಸಕ್ತರಿಗೆ ಅಮೂಲ್ಯ ಆಕರ ಗ್ರಂಥವಾಗಿದೆ.

ವಿಜೃಂಭಿಸಬಹುದಾದ ವಿದ್ವತ್ ಇದ್ದರೂ ಸಾಮಾನ್ಯ ವ್ಯಕ್ತಿಯಂತೆ ಕಾಣಿಸಿಕೊಳ್ಳುವ, ಕಾರಿನಲ್ಲಿ ಓಡಾಡಬಹುದಾದ ಪ್ರಾಧ್ಯಾಪಕರಾಗಿದ್ದರೂ ಕಾಲ್ನಡಿಗೆಯಲ್ಲೇ ಹೆಚ್ಚು ಸಂಚರಿಸುವ, ಅಮೇರಿಕಾ ಸುತ್ತಿ ಬಂದಿದ್ದರೂ ಕರ್ನಾಟಕದ ಕುಗ್ರಾಮಗಳನ್ನು ಜಾನಪದ ಸಿರಿಗಾಗಿ ಅರಸಿಹೋಗುವ

ಡಾ.ಪಿ.ಕೆ.ರಾಜಶೇಖರ ಅವರು ಹಲವು ಪ್ರತಿಭೆಗಳ ಸಂಗಮ. ಜನಪದ ಗೀತ ಗಾಯಕರಾಗಿ ರಾಜಶೇಖರರ ಸೇವೆ ಮತ್ತು ಸಾಧನೆ ವಿಶಿಷ್ಟವೂ ಅನನ್ಯವೂ ಆಗಿದೆ. ಜಾನಪದ ವಿದ್ವಾಂಸ ಹಾಗೂ ಶ್ರೇಷ್ಠ ಅಧ್ಯಾಪಕ – ಈ ನೆಲೆಗಳಿಗಿಂತಲೂ ಡಾ.ರಾಜಶೇಖರರು ಜನಪದ ಗಾಯಕರಾಗಿ ತಮ್ಮ ಜನಪ್ರಿಯತೆಯ ವ್ಯಾಪ್ತಿಯನ್ನು ವಿಸ್ತರಿಸಕೊಂಡಿದ್ದಾರೆ. ಸುಮಾರು ಮೂವತ್ತಾರು ವರ್ಷಗಳಿಂದ ನಾಡಿನಾದ್ಯಂತ ಅವರು ನೀಡುತ್ತಾ ಬಂದ ಜನಪದ ಗೀತಗಾಯನ ಕಾರ್ಯಕ್ರಮಗಳು, ಆಕಾಶವಾಣಿ ಹಾಗೂ ದೂರದರ್ಶನ ವಾಹಿನಿಗಳಲ್ಲಿ ಪ್ರಸಾರವಾಗುವ ಇವರ ಗಾಯನ ಕಾರ್ಯಕ್ರಮಗಳು ಮತ್ತು ಬಿಡುಗಡೆಗೊಂಡಿರುವ ಧ್ವನಿಸುರಳಿಗಳು ವಿದ್ವತ್‌ಲೋಕ ಹಾಗೂ ವಿದ್ಯಾರ್ಥಿವಲಯದಾಚೆಗೂ ಇವರ ಜನಪ್ರಿಯತೆ ವಿಸ್ತರಿಸಿರುವುದಕ್ಕೆ ಸಾರ್ಥಕ ಸಾಕ್ಷಿಗಳಾಗಿವೆ.

ಹಾಡುವ ಸಾಮರ್ಥ್ಯ ಮತ್ತು ಅದಕ್ಕೆ ಪೂರಕವಾದ ಸಿರಿಕಂಠ ರಾಜಶೇಖರ ಅವರಿಗೆ ಜನ್ಮಜಾತವಾಗಿ ಬಂದಿದೆ. ಪ್ರಾಥಮಿಕ ವಿದ್ಯಾರ್ಥಿಯಾಗಿದ್ದಾಗಲೇ ಇವರು ತಮ್ಮನ್ನು ಗಾಯಕನಾಗಿ ಗುರುತಿಸಿಕೊಂಡಿದ್ದರು. ಹುಟ್ಟೂರಾದ ಪಿರಿಯಾಪಟ್ಟಣದಲ್ಲಿ ಮತ್ತು ಸಂದರ್ಭಾನುಸಾರ ಆ ತಾಲ್ಲೂಕಿನ ಇತರ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಅಲ್ಲಿನ ಜನಪದ ಗಾಯಕ–ಗಾಯಕಿಯರು ಹಾಡುತ್ತಿದ್ದ ಗೀತೆಗಳನ್ನು ಕೇಳುತ್ತಾ ಅವುಗಳ ಸೊನೆಬನಿಗಳಿಗೆ ಇವರು ಬಾಲ್ಯದಲ್ಲಿಯೇ ಮಾರುಹೋಗಿದ್ದರು. ಹಾಡುವ ಸಾಮರ್ಥ್ಯ ಸಹಜವಾಗಿ ಇದ್ದುದರಿಂದ ಅವುಗಳನ್ನು ಅನುಕರಿಸಿ ಹಾಡುವ, ಹಾಡುತ್ತಾ, ಕಲಿಯುವ ಪ್ರಯತ್ನಗಳು ಆಗಲೇ ಪ್ರಾರಂಭವಾದವು. ಇದರ ಜೊತೆಗೆ ಆ ದಿನಗಳಲ್ಲಿ ಪಿ.ಕೆ. ಆರ್.ಅವರ ಶಾಲಾ ಉಪಾಧ್ಯಾಯರುಗಳು – ಮುಖ್ಯವಾಗಿ, ಪಿ.ಕೆ. ಆರ್. ಇಂದಿಗೂ ಸ್ಮರಿಸಿ ಗೌರವಿಸುವ ಗುರುಗಳಾದ ದಕ್ಷಿಣಾಮೂರ್ತಿ, ಟಿ.ಎಚ್.ಶಿವನಂಜೇದೇವರು, ಪಿ.ವಿ.ಶಂಕರಪ್ಪ, ಹಿಟ್ನೆಹೆಬ್ಬಾಗಿಲು ಕಾಳಪ್ಪ, ಅಹಮದ್ ಹಫೀಜ್, ಗೊರಳ್ಳಿ ಚೆಲುವಯ್ಯ ಮುಂತಾದ ಮಹನೀಯರು ಇವರ ಗಾಯನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದು ಇವರ ಪ್ರತಿಭಾ ವಿಕಸನಕ್ಕೆ ಇಂಬು ದೊರಕಿದಂತಾಯಿತು. ಪಠ್ಯಪುಸ್ತಕದಲ್ಲಿನ

ಪದ್ಯಗಳಿಗೆ ಸ್ವಯಂ ರಾಗ ಸಂಯೋಜಿಸಿ ಹಾಡುವುದು ಹಾಗೆಯೇ ಜನಪ್ರಿಯ ಟ್ಯೂನ್‌ಗಳಿಗೆ ತಾವೇ ಸಾಹಿತ್ಯ ರಚಿಸಿ ಹಾಡುವುದು–ಇಂಥ ಸೃಜನಶೀಲ ವರ್ತನೆಗಳಿಂದ ರಾಜಶೇಖರ ಅವರು ತಮ್ಮೊಳಗಿನ ಗಾಯಕನನ್ನು ಜೀವಂತವಾಗಿರಿಸಿಕೊಳ್ಳುವುದಲ್ಲದೆ, ಆ ಗಾಯನ ಪ್ರತಿಭೆಗೆ ಮೊನಚನ್ನೂ ವೈವಿಧ್ಯದ ಮೆರುಗನ್ನೂ ತಂದುಕೊಂಡರು. ಮುಂದೆ ಪಿ.ಯು.ಸಿ. ಹಾಗೂ ಬಿ.ಎ.ವಿದ್ಯಾಭ್ಯಾಸದ ಅವಧಿಯಲ್ಲಿಯೂ ಅಧ್ಯಯನಶೀಲತೆಯ ಜೊತೆಗೆ ತಮ್ಮ ಗಾಯನ ಸೃಜನಶೀಲತೆಯನ್ನು ಇವರು ಉಜ್ಜೀವನಗೊಳಿಸಿಕೊಂಡದ್ದು ವಿಶೇಷ. ಮುಂದೆ ಜನಪದ ಮಹಾಗಾಯಕನಾಗಿ ರಾಜಶೇಖರರು ವಿಜೃಂಭಿಸಲು ಇದು ಸಹಕಾರಿಯಾಯಿತು.

ನಾಡಿನ ಹೆಸರಾಂತ ಜಾನಪದ ವಿದ್ವಾಂಸರೂ, ಶ್ರೇಷ್ಠ ಕವಿಗಳೂ, ವಿಮರ್ಶಕರೂ, ನಾಟಕಕಾರರೂ, ಅದ್ವಿತೀಯ ಶಿಷ್ಯವತ್ಸಲರೂ ಆದ ಡಾ.ರಾಗೌ ಅವರಿಂದ ‘ಜಾನಪದ ದೀಕ್ಷೆ’ಯನ್ನು ಪಡೆದ ತರುವಾಯದಲ್ಲಿ ರಾಜಶೇಖರರು ಜಾನಪದದ ಜೈತ್ರಯಾತ್ರೆಯನ್ನು ಕೈಗೊಂಡು ಮಹಾದಿಗ್ವಿಜಯ ಸಾಧಿಸಿದರು. ಜಾನಪದ ಕ್ಷೇತ್ರಕಾರ್ಯಕ್ಕೆ ಪಾದಾರ್ಪಣೆ ಮಾಡಿದ ಪಿ.ಕೆ.ಆರ್. ಜನಪದ ಸಾಹಿತ್ಯದ ಇತರ ಪ್ರಕಾರಗಳ ಸಂಪಾದನೆಗಿಂತ ‘ಕಾವ್ಯ ಸಂಪಾದನೆ’ಗೆ ಮೊದಲು ಆಸಕ್ತಿ ತೋರಿದ್ದು ವಿಶೇಷ. ಮೂಲತಃ ಗಾಯಕರಾಗಿದ್ದ ಅವರಿಗೆ ಇದು ಸಹಜವೂ ಆಗಿತ್ತು. ಇದರ ಜೊತೆಗೆ ‘ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತೀ’ ಎಂಬ ಮಾತಿನಂತೆ ಇವರು ಆರಂಭಿಕ ಹಂತದಲ್ಲಿಯೇ ‘ಬೆಟ್ಟದ ಚಾಮುಂಡಿ’ ಹಾಗೂ ‘ಮಲೆಯ ಮಾದೇಶ್ವರ’ದಂಥ ಮಹತ್ಕೃತಿಗಳ ಶಾಸ್ತ್ರೀಯ ಸಂಪಾದನೆಗೆ ತೊಡಗಿದರು. ಗಾಯಕನ ನೆಲೆಯಿಂದ ನೋಡಿದರೆ ಜನಪದ ಬಿಡಿಗೀತೆಗಳ ಕಲಿಕೆ–ಗಾಯನಕ್ಕಿಂತ ಮಹಾಕಾವ್ಯಗಳ ಕಲಿಕೆ–ಗಾಯನ ಕ್ಲಿಷ್ಟಕರ. ಆದರೆ ರಾಜಶೇಖರ ಅವರು ಮೊದಲ ಘಟ್ಟದಲ್ಲಿಯೇ ಜನಪದ ಗೀತಗಾಯನ ಕಲಿಕಾ ಬೇಟೆಯಲ್ಲಿ ಸಿಂಹಬೇಟೆಯನ್ನೇ ಆಡಿದರು. ಇದರಿಂದಾಗಿ ಅವರಿಗೆ ಇನ್ನುಳಿದ ಗೀತಪ್ರಕಾರಗಳನ್ನು ಕಲಿತು ಕಂಠಗತ ಮಾಡಿಕೊಳ್ಳುವುದು

ಒಂದರ್ಥದಲ್ಲಿ ಸುಲಭವಾಯಿತು.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಮಾತೊಂದು ಪ್ರಸಿದ್ಧವಾಗಿದೆ. ವಿಶೇಷವಾಗಿ ಸಂಗೀತ ಕಲಿಕೆಗೆ – ಅದು ಯಾವುದೇ ಪ್ರಕಾರದ್ದಾಗಿರಲಿ – ಗುರುವಿನ ಸಾಮೀಪ್ಯ, ಒಡನಾಟ, ಸಾಹಚರ್ಯ ಬಲುಮುಖ್ಯ. ಈ ನಿಟ್ಟಿನಲ್ಲಿ ರಾಜಶೇಖರ ಅವರು ಜನಪದ ಮೂಲಗಾಯಕರೊಡನೆ ಇರಿಸಿಕೊಂಡ ಒಡನಾಟ, ಬೆರೆತ ಬಗೆ, ಅವರನ್ನು ನಡೆಸಿಕೊಂಡ ರೀತಿ, ಮಾಡಿದ ತ್ಯಾಗ – ಇತ್ಯಾದಿ ಸಂಗತಿಗಳು ಬೆರಗು ಮೂಡಿಸುತ್ತವೆ. 'ದಾರಿದ್ರ್ಯ ಚಕ್ರಾಧಿಪತ್ಯದ ದೀನ-ಚಕ್ರವರ್ತಿ'ಗಳಾದ ಜನಪದ ಕವಿ–ಗಾಯಕರನ್ನು 'ಸಂಪನ್ಮೂಲ ವ್ಯಕ್ತಿ'ಗಳೆಂದು ಪರಿಭಾವಿಸುವ ಪ್ರವೃತ್ತಿ ಇತ್ತೀಚಿನದು. ಆದರೆ ಪಿ.ಕೆ. ಆರ್. ಆ ಕಾಲಕ್ಕೇ ಜನಪದ ಗಾಯಕರನ್ನು 'ಅಮೂಲ್ಯ ಸಂಪತ್ತಿನ ಒಡೆಯರು', 'ಅನುಪಮ ಕಲಾವಿದರು' ಎಂದು ಸರಿಯಾಗಿ ಗ್ರಹಿಸಿ ನಡೆದುಕೊಂಡದ್ದರಿಂದ ಇಂದು ಸ್ವಯಂ ರಾಜಶೇಖರ ಅವರೇ ಅಪರೂಪದ ಜನಪದ ಗೀತೆಗಳ ಅಸಾಧಾರಣ ಗಾಯಕರಾಗಿ ಪ್ರಸಿದ್ಧರಾಗಿದ್ದಾರೆ. ಜನಪದ ಕಾವ್ಯಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ವಿದ್ವತ್‌ವಲಯದಲ್ಲಿ ಹೆಸರು ಮಾಡಬೇಕು. ಅದನ್ನು ಜೋಪಾನವಾಗಿಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ ಉನ್ನತ ಹುದ್ದೆಯೊಂದನ್ನು ದಕ್ಕಿಸಿಕೊಳ್ಳಬೇಕೆಂಬ ಹಂಬಲ ಅಲ್ಲಿ ಕಿಂಚಿತ್ತೂ ಕಂಡು ಬರುವುದಿಲ್ಲ. ರಾಜಶೇಖರ ಅವರ ಹೆಸರನ್ನು ಜಾನಪದ ಕ್ಷೇತ್ರದಲ್ಲಿ ಚಿರಸ್ಥಾಯಿಗೊಳಿಸಿದ 'ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ' ಕೃತಿಯ ಪ್ರಸ್ತಾವನೆಯಲ್ಲಿ ಪ್ರಸ್ತಾಪಿತವಾಗಿರುವ ರೋಮಾಂಚನಕಾರಿ ವಿವರಗಳನ್ನು ಅವಲೋಕಿಸಿದರೆ ಇದು ಸ್ಪಷ್ಟವಾಗುತ್ತದೆ. ಒಟ್ಟಾರೆ ಜನಪದ ಸಂಗೀತದ ಕಲಿಕಾ ಹಂತದಲ್ಲಿ ಪಿ.ಕೆ.ಆರ್. "ತಾನು ಲಯವೇ ಆದಂಥ ನಾದೋಪಾಸನೆ"ಯಲ್ಲಿ ತನ್ಮಯರಾದರೆನ್ನಬೇಕು. ಈ ತಾದಾತ್ಮ್ಯದಿಂದಲೇ ಅವರು ಜನಪದ ಸಂಗೀತದಲ್ಲಿ ಅದ್ವಿತೀಯ ಸಾಧನೆ ಮಾಡುವುದು ಸಾಧ್ಯವಾಯಿತು.

ಕನ್ನಡ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿರುವವರಲ್ಲಿ ಹೆಚ್ಚಿನ ವಿದ್ವಾಂಸರು ಸಾಹಿತ್ಯ ಸಂಪಾದನೆ ಮತ್ತು ವಿಮರ್ಶೆ–ವಿಶ್ಲೇಷಣೆಯ ನೆಲೆಯಲ್ಲಿ ಗಣ್ಯ ಸಾಧನೆ ಮಾಡಿದ್ದಾರೆ. ಆದರೆ ಜನಪದ ಸಂಗೀತದ 'ಸಂಪಾದನೆ', ವಿಶ್ಲೇಷಣೆ ಮತ್ತು ಪ್ರಯೋಗ – ಈ ನೆಲೆಗಳಲ್ಲಿ ಕನ್ನಡದ ಸಂದರ್ಭದಲ್ಲಿ ಡಾ.ಪಿ.ಕೆ.ರಾಜಶೇಖರರಂತೆ ಮಹತ್ವದ ಸಾಧನೆ ಮಾಡಿದ ಮಹನೀಯರು ನನಗೆ ತಿಳಿದಂತೆ ಹೆಚ್ಚಿಲ್ಲ. ಪಿ.ಕೆ.ಆರ್.ಜಾನಪದ ಕ್ಷೇತ್ರಕಾರ್ಯವನ್ನು ಆರಂಭಿಸಿದ್ದು ಎಪ್ಪತ್ತರ ದಶಕದಲ್ಲಿ. ಜನಪದ ಕಾವ್ಯಗಳನ್ನು ಧ್ವನಿಮುದ್ರಿಸಿಕೊಳ್ಳುವ ಸುಲಭಸಾಧನಗಳು ಆಗ ಲಭ್ಯವಿರಲಿಲ್ಲ. ಬಹುಶಃ ಆಗಷ್ಟೇ ಬಳಕೆಗೆ ಬಂದಿರಬಹುದಾದ 'ಟೇಪ್‌ರೆಕಾರ್ಡರ್' ಆ ಕಾಲಕ್ಕೆ ತುಂಬಾ ದುಬಾರಿಯಾದ ಉಪಕರಣವಾಗಿತ್ತು. ಅಂಥ ದಿನಗಳಲ್ಲಿ ಜನಪದ ಸಾಹಿತ್ಯವನ್ನು ಬರೆದು ಸಂರಕ್ಷಿಸಿಕೊಂಡ ರಾಜಶೇಖರ ಅವರು ಜನಪದ ಸಂಗೀತವನ್ನು ತಮ್ಮ ಅಸಾಧಾರಣ ನೆನಪಿನ ಶಕ್ತಿಯಿಂದ ಕಾಪಾಡಿಕೊಂಡರು. ಜನಪದ ಬಿಡಿಗೀತೆಗಳ ಒಂದು ಸಾಮಾನ್ಯ ಲಕ್ಷಣವೆಂದರೆ ಅವುಗಳು ಸಣ್ಣ ಪ್ರಮಾಣದ ವ್ಯತ್ಯಾಸದೊಡನೆ ತಮ್ಮ ಪ್ರತ್ಯೇಕತೆಯನ್ನು, ಅನನ್ಯತೆಯನ್ನು ಕಾಪಾಡಿಕೊಳ್ಳುತ್ತವೆ. ಇಂಥವುಗಳ ಮಟ್ಟುಗಳನ್ನು ಅದಲು–ಬದಲಾಗದಂತೆ, ಕಲಬೆರಕೆ ಆಗದಂತೆ ನೆನಪಿಟ್ಟುಕೊಳ್ಳುವುದು ಖಂಡಿತ ಕಷ್ಟಕರ. ಅಂಥ ಗೀತೆಗಳನ್ನು ಮತ್ತೆ ಮತ್ತೆ ಹಾಡುತ್ತಾ ಆ ಮಟ್ಟುಗಳ ಕಟ್ಟು ಕೆಡದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ರಾಜಶೇಖರರು ನಡೆಸಿರಬಹುದಾದ ಪ್ರಯತ್ನಗಳನ್ನು ಊಹಿಸಬಹುದು. ಪ್ರೀತಿ ಪ್ರಧಾನವಾದರೆ ಮಾತ್ರ ಇಂಥ ಪ್ರಯತ್ನಗಳು ಸಾಫಲ್ಯ ಪಡೆಯುತ್ತವೆ. ಪಿ..ಕೆ.ಆರ್.ಅವರು ನೆನಪಿಟ್ಟುಕೊಂಡಿರುವ ಮತ್ತು ಹಾಡುವ ಅಸಂಖ್ಯಾತ ಮಟ್ಟುಗಳನ್ನು ಅವಲೋಕಿಸಿದಾಗ ಅವರು ಜನಪದ ಸಂಗೀತವನ್ನು ಪ್ರೀತಿಸುವ ಅಗಾಧತೆ ಅರಿವಿಗೆ ಬರುತ್ತದೆ. ಜನಪದ ಸಾಹಿತ್ಯ ಮತ್ತು ಸಂಗೀತ ತನ್ನ ಸಹಜ ನೆಲೆಯಲ್ಲಿ ಉಳಿದು ಬೆಳೆದುಬಂದಿರುವುದು ಸ್ಮರಣಾ ಪರಂಪರೆಯಿಂದಲೇ. ಪಿ.ಕೆ.ಆರ್. ಆ ಪರಂಪರೆಯಂತೆಯೇ ಈ ಸಂಗೀತವನ್ನು ಕಲಿತವರು. ಈ ಅರ್ಥದಲ್ಲಿ

ಇವರನ್ನು ಹವ್ಯಾಸಿ ಜನಪದ ಗಾಯಕ ಎಂದು ಕರೆಯುವುದು ಅಷ್ಟು ಉಚಿತವಾಗಲಾರದು ಎನಿಸುತ್ತದೆ.

ಜನಪದ ಗೀತೆಗಳ ಮೂಲಮಟ್ಟುಗಳನ್ನು ಗುರುತಿಸಿ ಕಲಿಯುವ ಹಂತದಲ್ಲಿ ಅವರ ಸಹಾಯಕ್ಕೆ ಒದಗಿಬಂದ ಅವರ ಇನ್ನೊಂದು ಸಾಮರ್ಥ್ಯವನ್ನು ಅವಶ್ಯಕವಾಗಿ ಗಮನಿಸಬೇಕು. ಸಂಗೀತ ಪ್ರೇಮಿಯಾಗಿದ್ದ ರಾಜಶೇಖರರು ಜಾನಪದ ಕ್ಷೇತ್ರ ಕಾರ್ಯಕ್ಕಿಳಿಯುವ ಕಾಲಕ್ಕಾಗಲೇ ಆ ಕಾಲದ ಅನೇಕ ಕನ್ನಡ ಹಿಂದಿ, ತಮಿಳು ಭಾಷೆಗಳ ಚಲನಚಿತ್ರಗೀತೆಗಳನ್ನು ಸಾಕಷ್ಟು ಕೇಳಿ ಕಲಿತಿದ್ದರು. ಈ ತಿಳುವಳಿಕೆ ಜನಪದ ಗೀತೆಗಳ ಮೂಲಧಾಟಿಗಳನ್ನು ಸರಿಯಾಗಿ ಗುರುತಿಸಲು ಪರೋಕ್ಷವಾಗಿ ನೆರವಿಗೆ ಬಂದಿತೆನ್ನಬಹುದು. ಅವರೇ ಹೇಳುವಂತೆ ಎಪ್ಪತ್ತರ ದಶಕದ ಆ ಕಾಲದಲ್ಲಿಯೇ ಕೆಲವು ಉತ್ತಮ ಜನಪದ ಗಾಯಕರೇ ಜನಪದ ಸಾಹಿತ್ಯಕ್ಕೆ ಕೆಲವು ಜನಪ್ರಿಯ ಚಿತ್ರಗೀತೆಗಳ ಧಾಟಿಗಳನ್ನು ಅಳವಡಿಸಿ ಹಾಡುತ್ತಿದ್ದರು. ಸಹಜವಾಗಿಯೇ ಅಂಥ ಸಿನಿಮಾಗೀತೆಗಳಿಗೆ ತಕ್ಷಣಕ್ಕೆ ಸೆಳೆಯುವ ಒಂದು ವಿಶೇಷ ಆಕರ್ಷಣೆ ಇರುತ್ತದೆ. ಜನಪದ ಮೂಲಗಾಯಕರೇ ಅಂಥ ಧಾಟಿಗಳನ್ನು ಅಳವಡಿಸಿ ಹಾಡಿದಾಗ ಅವುಗಳಿಗೆ ಮನಸೋತು ಅವುಗಳನ್ನೇ ಮೂಲಧಾಟಿಗಳೆಂದು ಭ್ರಮಿಸಿ ಅಂಥವುಗಳನ್ನೇ ಕಲಿಯುವ, ಪ್ರಸಾರ ಮಾಡುವ, ತನ್ಮೂಲಕ ಮೂಲ ಜನಪದ ಮಟ್ಟುಗಳನ್ನು ಮೂಲೆಗುಂಪಾಗಿಸುವ ಸಾಧ್ಯತೆ ಇತ್ತು (ಇಂಥ ಪ್ರಯತ್ನಗಳು ಅಲ್ಲಲ್ಲಿ ನಡೆದಿರುವುಂಟು). ಆದರೆ ರಾಜಶೇಖರ ಅವರಿಗೆ ಆ ಕಾಲದ ಚಿತ್ರಗೀತೆಗಳು ಚೆನ್ನಾಗಿ ತಿಳಿದಿದ್ದುದರಿಂದ ಎಲ್ಲೆಲ್ಲಿ ಅಂಥ ಧಾಟಿಗಳ ಕಲಬೆರಕೆ ಆಗುತ್ತಿತ್ತೋ ಅದನ್ನು ಗುರುತಿಸಿ ಅವುಗಳನ್ನು ತ್ಯಜಿಸುವ ಪ್ರಯತ್ನ ಮಾಡಿದರು. ಅಷ್ಟೇ ಅಲ್ಲದೆ ಜನಪದ ಮೂಲ ಗಾಯಕರಿಗೆ ಅಂಥ ಪ್ರವೃತ್ತಿಗಳನ್ನು ಬಿಡುವಂತೆಯೂ ಸೂಕ್ತ ಸಲಹೆಗಳನ್ನು ನೀಡಿದರು. ಇದರಿಂದಾಗಿ ಜನಪದ ಗೀತೆಗಳ ಎಷ್ಟೋ ಮೂಲಮಟ್ಟುಗಳ ಕಣ್ಮರೆಯಾಗುವುದು ತಪ್ಪಿತೆನ್ನಬಹುದು.

ಜನಪದ ಗಾಯಕರಾಗಿ ಡಾ.ರಾಜಶೇಖರ ಅವರು

ರೂಪುಗೊಳ್ಳುವಲ್ಲಿ ಡಾ.ರಾಗೌ ಮತ್ತು ಡಾ.ಸಿ.ಪಿ.ಕೆ. ಈ ಗುರುದ್ವಯರು ನೀಡಿದ ಪ್ರೋತ್ಸಾಹ ಮಹತ್ವದ್ದು. ಜಾನಪದ ಕ್ಷೇತ್ರದಲ್ಲಿ, ಅದರಲ್ಲೂ ಕಾವ್ಯಕ್ಷೇತ್ರದಲ್ಲಿ ಕೆಲಸ ಮಾಡುವವರು ಗಾಯಕರೂ ಆಗಿದ್ದರೆ ಅದು ವಿಶೇಷ ಸಂಗತಿಯೇ ಸರಿ ಎಂದು ಪರಿಭಾವಿಸಿದ ಈ ಇಬ್ಬರೂ ಗುರುಗಳಾಗಿ ರಾಜಶೇಖರರು ಕಲಿತು ಹಾಡುತ್ತಿದ್ದ ಗೀತೆಗಳನ್ನು ಕೇಳಿ ಆನಂದಿಸುತ್ತಿದ್ದುದಲ್ಲದೆ ಈ ಕಲೆಯನ್ನು ರೂಢಿಸಿಕೊಳ್ಳುವಂತೆ ನಿರ್ವ್ಯಾಜ ಪ್ರೇಮದಿಂದ ಉತ್ತೇಜಿಸಿದರು. "ಏನ್ರೀ, ಈವತ್ತು ಯಾರು ಕಲಾವಿದರು ಬಂದಿಲ್ವೆ? ಅವರು ಬರದೇ ಇದ್ರೇನು, ನೀವೇ ಕಂಸಾಳೆ ಹಿಡಿದು ಕೂತ್ರಾಯ್ತು" ಎನ್ನುತಿದ್ದ ಸಿಪಿಕೆ ಅವರ ಮಾತಿನಂತೆ ಪಿ.ಕೆ.ಆರ್ ತಾವೇ ಕಂಸಾಳೆ ಹಿಡಿದರು; ಶಿಷ್ಟ ಸಮುದಾಯವನ್ನು ಜನಪದ ಗೀತೆಗಳ ಮಧುರ ಗಾಯನದ ಗಾರುಡಿಗತನದಿಂದ ಮೋಡಿಗೊಳಿಸಿದರು. ಅವರು ಅಂದು ಹಿಡಿದ ಕಂಸಾಳೆಯನ್ನು ಇಂದಿಗೂ ಕೈಯಿಂದ ಇಳಿಸಿಲ್ಲ. ಕಂಸಾಳೆಯ ತಾಳ ನಿನಾದದೊಡನೆ ತಮ್ಮ ಇನಿದನಿಯ ಗಾಯನವನ್ನು ಬೆರೆಸಿ ಜನಪದ ನಾದೋಪಾಸನೆಯಲ್ಲಿ ಉತ್ಸುಕರಾಗಿ ವಿಹರಿಸುತ್ತಿದ್ದಾರೆ.

ಡಾ.ಪಿ.ಕೆ.ರಾಜಶೇಖರ ಅವರು ಜನಪದ ಗಾಯಕರಾಗಿ ಯಶಸ್ಸು ಪಡೆಯಲು ಎಪ್ಪತ್ತರ ದಶಕದ ಅವರ ಸಹಪಾಠಿಗಳ ಸಹಕಾರ ಗಮನಾರ್ಹವಾದುದು. ವಾಸ್ತವವಾಗಿ ಪಿ.ಕೆ.ಆರ್.ಅವರ ಸಿರಿಕಂಠದಿಂದ ಜನಪದ ಸಂಗೀತ ಮೊದಲಿಗೆ ಮೊಳಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದಲ್ಲಿ. ಆ ಕಾಲಕ್ಕೆ ಸಂಶೋಧನಾ ವಿದ್ಯಾರ್ಥಿಯಾಗಿದ್ದ ಪಿ.ಕೆ.ಆರ್.ಜನಪದ ಕಾವ್ಯ ಸಂಗ್ರಹದ ಕಾರಣಕ್ಕಾಗಿ ಅನೇಕ ಮೂಲ ಜನಪದ ಗಾಯಕರನ್ನು ವಿದ್ಯಾರ್ಥಿನಿಲಯಕ್ಕೇ ಕರೆತರುತ್ತಿದ್ದರು. ಅಂದಿನ ಇವರ ವಿದ್ಯಾರ್ಥಿನಿಲಯದ ಸಹವಾಸಿಗಳು ಆ ಮೂಲಗಾಯಕರನ್ನು ಅಭಿಮಾನದಿಂದ ಆದರಿಸುತ್ತಿದ್ದುದ್ದಲ್ಲದೆ ಬಿಡುವಿನ ವೇಳೆಯಲ್ಲಿ ರಾಜಶೇಖರ ಅವರನ್ನೇ ಜನಪದ ಗೀತೆಗಳನ್ನು ಹಾಡುವಂತೆ ಪ್ರೀತಿಯಿಂದ ಒತ್ತಾಯಿಸುತ್ತಿದ್ದರು. ಮಿತ್ರ ಪ್ರೀತಿಗೆ ಎಂದೂ ಮಣಿಯುವ ರಾಜಶೇಖರ ಅವರು ಅಂದೂ ಮಿತ್ರರ ಪ್ರೀತಿಗೆ ಮಣಿದು

ಜನಪದ ಕಾವ್ಯಕ್ಕೆ ಒಲಿದು ಮನತುಂಬಿ ಹಾಡುತ್ತಿದ್ದರು; ಆಸಕ್ತಿಯಿಂದ ಕೇಳುತ್ತಿದ್ದರು; ಅಭಿಮಾನದ ಮಹಾ ಅಕ್ಕರೆಯಿಂದ ಪ್ರೋತ್ಸಾಹಿಸುತ್ತಿದ್ದರು. ಹೀಗಾಗಿ ಪಿ.ಕೆ.ಆರ್.ಎಪ್ಪತ್ತರ ದಶಕದ ಪೂರ್ವಾರ್ಧದಲ್ಲಿಯೇ ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ, ಚಿಕ್ಕಮಗಳೂರು, ತುಮಕೂರು ಮುಂತಾದ ಜಿಲ್ಲೆಗಳ ನಾನಾ ಹಳ್ಳಿಗಳಿಗೆ ಗೆಳೆಯರ ಆಹ್ವಾನದಂತೆ ಹೋಗಿ ಹಾಡುತ್ತಿದ್ದರು. ಒಂದರ್ಥದಲ್ಲಿ ಆ ಕಾಲಕ್ಕೆ ಅವರು ಜನಪದ ಗಾಯಕರಾಗಿ ಕನ್ನಡಲೋಕಕ್ಕೆ ತಮ್ಮನ್ನು ಪರಿಚಯಿಸಿಕೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಸಹಪಾಠಿಗಳು ಅನಂತರದ ದಿನಗಳಲ್ಲೂ ತಾವು ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದ ಕಾಲೇಜುಗಳಿಗೂ ಪಿ.ಕೆ.ಆರ್.ಅವರನ್ನು ಆಹ್ವಾನಿಸಿ ಹಾಡಿಸಿದ್ದಾರೆ. ಇದಕ್ಕೆ ಜನಪದ ಗೀತೆಗಳ ಮೂಲ ಸೊಬಗು ಒಂದು ಕಾರಣವಾದರೆ, ರಾಜಶೇಖರ ಅವರು ಅವುಗಳನ್ನು ಅನುಪಮವಾಗಿ ಹಾಡುತ್ತಿದ್ದುದು ಇನ್ನೊಂದು ಮುಖ್ಯ ಕಾರಣವಾಗಿದೆ.

ಮುಂದೆ ಪಿ.ಕೆ.ರಾಜಶೇಖರ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಆಯ್ಕೆಗೊಂಡು ಅಲ್ಲಿನ ಲಲಿತಕಲೆಗಳ ಕಾಲೇಜಿಗೆ ನೇಮಕಗೊಂಡರು. ಜನಪದ ಸಂಗೀತದ ದಿಗ್ಗಜರಾಗಿ ರೂಪುಗೊಳ್ಳುತ್ತಿದ್ದ ರಾಜಶೇಖರ ಅವರು ಅಲ್ಲಿ ಶಿಷ್ಟ-ಶಾಸ್ತ್ರೀಯ ಸಂಗೀತಕ್ಕೆ ಮುಖಾಮುಖಿಯಾದರು. ನಿಜವಾದ ಸಂಗೀತಪ್ರೇಮಿಗೆ ಸಂಗೀತದ ಯಾವ ಪ್ರಕಾರವೂ ಪರಕೀಯ ಅನಿಸುವುದಿಲ್ಲ. ಎನಿಸಬಾರದು. ಲಲಿತಕಲೆಗಳ ಕಾಲೇಜಿನಲ್ಲಿ ಪ್ರವಚನ ಮತ್ತು ಪ್ರಾಯೋಗಿಕ ನೆಲೆಗಳಲ್ಲಿ ಶಿಷ್ಟ ಸಂಗೀತವನ್ನು ನಿತ್ಯವೂ ಕೇಳುತ್ತಿದ್ದ ಪಿ.ಕೆ.ಆರ್.ಅದರ ಶ್ರೇಷ್ಠತೆಗೆ ಮಾರುಹೋಗಿ ಜನಪದ ಸಂಗೀತವನ್ನು ಮರೆಯಲಿಲ್ಲ ಎಂಬುದು ಮುಖ್ಯ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಅವರು 'ಶಿಷ್ಟ ಸಂಗೀತಕ್ಕೆ ಜನಪದ ಸಂಗೀತವೇ ತಾಯಿಬೇರು' ಎಂದು ಸರಿಯಾಗಿ ಹಾಗೂ ಬಲವಾಗಿ ನಂಬಿದ್ದೇ ಕಾರಣವಾಗಿತ್ತು. ಶಾಸ್ತ್ರೀಯ ಸಂಗೀತ ನಿತ್ಯ ಪ್ರತಿಧ್ವನಿಸುವ ಆ ಪರಿಸರದಲ್ಲಿ ರಾಜಶೇಖರ ಅವರು ಸಹಜವಾಗಿಯೇ ಪ್ರಭಾವಿತರಾದರು. ಆದರೆ ಆ ಪ್ರಭಾವ

ಅದನ್ನು ಕೇಳಿ ಆನಂದಿಸುವ ಮತ್ತು ಕೆಲವು ರಾಗಗಳು ಹಾಗೂ ಕೃತಿಗಳನ್ನು ಗಾಯನದ ನೆಲೆಯಲ್ಲಿ ಕಲಿಯುವ ಮಟ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಇಷ್ಟೇ ಅಲ್ಲದೆ ಶಿಷ್ಟ ರಾಗಕ್ಕೆ ಅಳವಡುವಂತೆ ಕೃತಿಗಳನ್ನು ರಚಿಸುವ ಪ್ರವೃತ್ತಿಗೂ ಇಲ್ಲಿನ ಪರಿಸರ ಪ್ರಭಾವ ಬೀರಿತು. ಇದಕ್ಕೆ ಉದಾಹರಣೆಯಾಗಿ ಇವರು ಕಮಾಚ್ ರಾಗಕ್ಕೆ ನಿಬದ್ಧಗೊಳಿಸಿ ರಚಿಸಿದ ಚುಂಚನಗಿರಿ ಭೈರವನನ್ನು ಕುರಿತ 'ಚುಂಚನಗಿರಿ ಭೈರವ ಸ್ವಾಮಿ ಬಾರೊ' ಎಂಬ ಕೃತಿಯನ್ನು ಗಮನಿಸಬಹುದು. ಈ ಹಾದಿಯಲ್ಲೇ ಆಸಕ್ತಿ ವಹಿಸಿ ಅವರು ಕ್ರಿಯಾಶೀಲರಾಗಿದ್ದಿದ್ದರೆ ಬಹುಶಃ ಪಿ.ಕೆ.ಆರ್. ವಾಗ್ಗೇಯಕಾರರಾಗಿಯೂ ತಮ್ಮ ಅಸ್ತಿತ್ವವನ್ನು ದಾಖಲಿಸುತ್ತಿದ್ದರೇನೋ! ಆದರೆ ಜನಪದ ಗೀತೆಗಳ ಮೂಲ ಮಟ್ಟುಗಳು ಹಾಗೂ ಹಾಡುವ ಅನನ್ಯತೆಯ ಕಡೆಗೆ ಇವರು ಕಟ್ಟುನಿಟ್ಟಿನ ಶಿಸ್ತನ್ನು ಪ್ರಾಮಾಣಿಕವಾಗಿ ತೋರಿದ್ದರಿಂದ ಆ ಬಗೆಯ ಪ್ರವೃತ್ತಿಗಳಿಗೆ ತಮ್ಮನ್ನು ಒಡ್ಡಿಕೊಳ್ಳಲಿಲ್ಲ.

ಲಲಿತಕಲೆಗಳ ಕಾಲೇಜಿನ ಸೇವಾವಧಿಯಲ್ಲಿ ಪಿ.ಕೆ.ಆರ್.ಅವರಿಗೆ ಮೈಸೂರು ಆಕಾಶವಾಣಿಯ ಸಂಪರ್ಕ ಏರ್ಪಟಿದ್ದು ಒಂದು ಮುಖ್ಯ ಸಂಗತಿ. ಮೈಸೂರು ಆಕಾಶವಾಣಿಯಲ್ಲಿ ಆಗ್ಗೆ ಪ್ರಸಾರವಾಗಬೇಕಾಗಿದ್ದ ಬೇಂದ್ರೆಯವರ 'ಯಕ್ಷ'ನ ಗಾಯಕನಿಗಾಗಿ ಅರಸುತ್ತಾ ಒಮ್ಮೆ ಎನ್ಕೆಯವರು ಲಲಿತಕಲೆಗಳ ಕಾಲೇಜಿಗೆ ಬಂದರು. ಆಗ ಅಲ್ಲಿನ ಅಧ್ಯಾಪಕ ವೃಂದ ರಾಜಶೇಖರ ಅವರನ್ನು ಆಯ್ಕೆ ಮಾಡಿ ಕಳಿಸಿಕೊಟ್ಟಿತು. ಇದು ಇವರ ಗಾಯನ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಅನಂತರದ ದಿನಗಳಲ್ಲಿ ಮೈಸೂರು ಆಕಾಶವಾಣಿಯ ನಿರ್ದೇಶಕರಾಗಿದ್ದ ಶ್ರೀಮತಿ ಪುಟ್ಟತಾಯಮ್ಮ ಅವರು ರಾಜಶೇಖರ ಹಾಗೂ ಸಹಗಾಯಕರನ್ನು ಜನಪದ ಗೀತ ಗಾಯನಕ್ಕಾಗಿ ಆಡಿಷನ್‌ಗೊಳಪಡಿಸಿ ಆಕಾಶವಾಣಿಗೆ ಆಯ್ಕೆ ಮಾಡಿಕೊಂಡರು. ಅಂದಿನಿಂದ ಇಂದಿನವರೆಗೂ ಪಿ.ಕೆ. ಆರ್. ಆಕಾಶವಾಣಿಯಲ್ಲಿ ಮೂಲಮಟ್ಟಿನ ಜನಪದ ಗೀತೆಗಳನ್ನು ಹಾಡುತ್ತಾ ಬಂದಿದ್ದಾರೆ. ಜೊತೆಗೆ ಆಕಾಶವಾಣಿಯು ಆಗಾಗ ಆಹ್ವಾನಿತ ಶ್ರೋತೃಗಳಿಗಾಗಿ ಏರ್ಪಡಿಸುವ ವಿಶೇಷ ಕಾರ್ಯಕ್ರಮಗಳಲ್ಲಿಯೂ ಹಾಡಿ ಕೇಳುಗರನ್ನು ತಣಿಸಿದ್ದಾರೆ. ಪ್ರಸ್ತುತ ಪಿ.ಕೆ.ಆರ್. ಆಕಾಶವಾಣಿಯ

'ಬಿ' ದರ್ಜೆ ಕಲಾವಿದರಾಗಿ ಪದೋನ್ನತಿ ಹೊಂದಿ ಎಂದಿನಂತೆ ಹಾಡುತ್ತಿದ್ದಾರೆ.

ಅನಂತರದ ದಿನಗಳಲ್ಲಿ ಪಿ.ಕೆ.ಆರ್.ಯುವರಾಜ ಕಾಲೇಜಿಗೆ ವರ್ಗಾವಣೆ ಹೊಂದಿದರು. ಇಲ್ಲಿನ ಇವರ ಸೇವಾವಧಿಗೆ ಒಂದು ಮಹತ್ವವಿದೆ. ವೈವಿಧ್ಯಮಯವಾದ ಜನಪದ ಗೀತೆಗಳನ್ನು ಮೂಲಮಟ್ಟುಗಳಲ್ಲಿ ಹಾಡುತ್ತಾ ನಾಡಿನ ಸಂದರ್ಭದಲ್ಲಿ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವ ಪಿ.ಕೆ.ಆರ್. ನೇತೃತ್ವದ 'ಹೊನ್ನಾರು ಜನಪದ ಗಾಯನ ವೃಂದ'ದ ಹುಟ್ಟಿಗೆ ಕಾರಣವಾದ ಸನ್ನಿವೇಶ ನಿರ್ಮಾಣವಾದದ್ದು ಈ ಕಾಲಾವಧಿಯಲ್ಲಿಯೆ. ಆಗ ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ.ಚಾಮಯ್ಯನವರಿಗೆ ಜನಪದ ಗೀತೆಗಳೆಂದರೆ ಅಪಾರವಾದ ಅಕ್ಕರೆಯಿತ್ತು. ತಮ್ಮ ಸಹೋದ್ಯೋಗಿಯೊಬ್ಬರು ಜನಪದ ಗೀತೆಗಳನ್ನು ಚೆನ್ನಾಗಿ ಹಾಡುವುದನ್ನು ಗಮನಿಸಿದ ಅವರು ಕಾಲೇಜಿನಲ್ಲಿಯೇ ರಾಜಶೇಖರರ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಿ ಕಾಲೇಜಿನ ಸರ್ವರೂ ಇವರ ಗಾಯನದ ಸವಿಯನ್ನು ಅನುಭವಿಸುವಂತೆ ಮಾಡಿದರು. ಪಾಠ ಪ್ರವಚನ, ಪ್ರಯೋಗಗಳಲ್ಲಿಯೇ ಹೆಚ್ಚು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಅಲ್ಲಿನ ಪ್ರಾಧ್ಯಾಪಕರು ಇವರ ಗಾಯನವನ್ನು ಕೇಳಿ ವಿಶೇಷವಾಗಿ ಆನಂದಿಸಿದರು. ಈ ಕಾರ್ಯಕ್ರಮದಿಂದ ಹೆಚ್ಚು ರೋಮಾಂಚಿತರಾದ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ.ಕೆ.ಎಂ.ವೀರಪ್ಪನವರು ಅವರ ಹುಟ್ಟೂರಾದ ಮಂಡ್ಯ ಜಿಲ್ಲೆಯ ಕೀಲಾರ ಗ್ರಾಮದಲ್ಲಿ ರಾಜಶೇಖರರ ಜನಪದ ಗೀತಗಾಯನ ಕಾರ್ಯಕ್ರಮವೊಂದನ್ನು ಏರ್ಪಡಿಸಿದರು. ಕೀಲಾರದ ಸಹೃದಯರು ರಾಜಶೇಖರರ ಗಾಯನ ಕಾರ್ಯಕ್ರಮದಿಂದ ರೋಮಾಂಚಿತರಾದರು. ಕೆಲವೇ ತಿಂಗಳಲ್ಲಿ ಕೀಲಾರದ ಕೇಳುಗರು ಮತ್ತೆ ರಾಜಶೇಖರರ ಗಾಯನ ಕೇಳಲು ಹಂಬಲಿಸಿ ಆಹ್ವಾನಿಸಿದರು. ಆಗ ಪಿ.ಕೆ.ಆರ್. ತಮ್ಮ ಕೆಲವು ವಿದ್ಯಾರ್ಥಿಗಳನ್ನು ಸಹಗಾಯನಕ್ಕೆ ಸಜ್ಜುಗೊಳಿಸಿ ಕರೆದೊಯ್ದು ಕೀಲಾರದಲ್ಲಿ ಕಾರ್ಯಕ್ರಮ ನೀಡಿದರು. ಅಂದು ಇಡೀ ರಾತ್ರಿ ಹಾಡಿದರೂ ಕೀಲಾರದ ಜನತೆಗೆ ರಾಜಶೇಖರರ

ಗಾಯನ ಸಾಕೆನಿಸಲಿಲ್ಲ. ಪ್ರೊ.ಕೆ.ಎಂ.ವೀರಪ್ಪನವರು ಪ್ರೀತಿ-ವಿಶ್ವಾಸ ಹಾಗೂ ಕೀಲಾರದ ಜನತೆಯ ಜನಪದ ಕಲಾಭಿಮಾನ ಕಾರಣವಾಗಿ ಅಂದೇ 'ಹೊನ್ನಾರು ಜನಪದ ಗಾಯನ ವೃಂದ' ಜನ್ಮ ತಾಳಿತು. ಇಂಥ ಅನುಪಮ ಸಹೃದಯತೆಯನ್ನು ಮೆರೆದ ಕೆ.ಎಂ.ವೀರಪ್ಪ ಅವರಿಗೆ ತಾವು ಪ್ರಕಟಿಸಿದ ಜನಪದ ಗೀತೆಗಳ ಸಂಕಲನ 'ಅವ್ವ ನಿನ ದನಿ ಅಪರಂಜಿ' ಕೃತಿಯನ್ನು ಅರ್ಪಿಸುವ ಮೂಲಕ ರಾಜಶೇಖರರು ತಮ್ಮ ಕೃತಜ್ಞತೆಯನ್ನು ಮೆರೆದಿದ್ದಾರೆ. ಅನಂತರದ ದಿನಗಳಲ್ಲಿ 'ಹೊನ್ನಾರು ಜನಪದ ಗಾಯನ ವೃಂದ' ಬೆಳೆಯುತ್ತಾ ಬಂದ ಬಗೆ ಬೆರಗು ಮೂಡಿಸುತ್ತದೆ. ಅದು ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕಾದ ವಿಚಾರವಾಗಿದೆ.

ಡಾ.ಪಿ.ಕೆ.ರಾಜಶೇಖರ ಅವರು ಏಕಕಾಲಕ್ಕೆ ಹುಟ್ಟುಗಾಯಕರೂ, ಮೂಲ ಜನಪದ ಗಾಯಕರೂ, ಹವ್ಯಾಸಿ ಜನಪದ ಗಾಯಕರೂ ಆಗಿದ್ದಾರೆ. ಕನ್ನಡ ನಾಡಿನಲ್ಲಿ ಮಹಾಪ್ರತಿಭೆಯ ಮೂಲ ಗಾಯಕರಿದ್ದಾರೆ. ಹಾಗೆಯೇ ಹವ್ಯಾಸಿ ಜನಪದ ಗಾಯಕರೂ ಇದ್ದಾರೆ. ಆದರೆ ಅವರೆಲ್ಲಾ ಕೆಲವು ನಿರ್ದಿಷ್ಟ ಪ್ರಕಾರ, ಸಂಪ್ರದಾಯ ಹಾಗೂ ಪರಿಸರದ ಗೀತೆಗಳ ಗಾಯನಕ್ಕೆ ಸೀಮಿತವಾಗಿದ್ದಾರೆ. ಇಂಥವರ ಸಂದರ್ಭದಲ್ಲಿ ಜನಪದ ಗಾಯಕರಾಗಿ ಪಿ.ಕೆ.ಆರ್.ಅವರ ಅನನ್ಯತೆ ಎಂದರೆ ಅವರು ಹಲವು ಸಂಪ್ರದಾಯದ, ನಾನಾ ಪ್ರಕಾರದ ಗೀತೆಗಳನ್ನು ಹಾಡಬಲ್ಲ ದೈತ್ಯಗಾಯಕ ಎಂಬುದು. ಪಿಎಚ್.ಡಿ.ಪದವಿಗಾಗಿ 'ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಇಡೀ ದಕ್ಷಿಣ ಕರ್ನಾಟಕವನ್ನು ಕ್ಷೇತ್ರ ಕಾರ್ಯದ ಹಿನ್ನೆಲೆಯಲ್ಲಿ ಸುತ್ತಾಡಿದ ಅವರು ಅಸಂಖ್ಯಾತ ಗಾಯಕರನ್ನು ನೇರವಾಗಿ ಕಂಡಿದ್ದಾರೆ. ಅವರ ಕ್ಷೇತ್ರಕಾರ್ಯ ಕೇವಲ ಪದವಿನಿಷ್ಠ ಗುರಿಯನ್ನು ಹೊಂದಿರಲಿಲ್ಲ. ಹಾಗಾಗಿ ಪಿ.ಕೆ.ಆರ್. ತಮಗೆ ಕಂಡುಬಂದ ಎಲ್ಲಾ ಸಂಪ್ರದಾಯ-ಪ್ರಕಾರಗಳ ಜನಪದ ಗಾಯಕರಿಂದ ಅಪಾರ ಸಾಹಿತ್ಯ ಮತ್ತು ಮಟ್ಟುಗಳನ್ನು ಕಲೆಹಾಕಿಕೊಂಡರು. ನಿರಂತರ ಹಾಡುವಿಕೆಯಿಂದ ಆ ಎಲ್ಲಾ ಮಟ್ಟುಗಳನ್ನು ಕಂಠಸ್ಥವಾಗಿಸಿಕೊಂಡರು. ಹೀಗಾಗಿ ದೇವರಗುಡ್ಡರು, ನೀಲಗಾರರು, ಚೌಡಿಕೆಯವರು, ಕರಪಾಲದವರು,

ದೊಂಬಿದಾಸರು, ತೆಲುಗು ಜಂಗಮರು, ಹೆಳವರು – ಇತ್ಯಾದಿ ಸಂಪ್ರದಾಯದ ಎಲ್ಲಾ ಗೀತೆಗಳನ್ನು ಹಾಡಬಲ್ಲ ಸಾಮರ್ಥ್ಯವನ್ನು ಪಿ.ಕೆ.ಆರ್. ಹೊಂದಿದ್ದಾರೆ. ಬಹುಶಃ ಹೀಗೆ ಹಲವು ಸಂಪ್ರದಾಯಗಳ ಜನಪದ ಕಾವ್ಯ ಹಾಗೂ ಬಿಡಿಗೀತೆಗಳನ್ನು ಹಾಡಬಲ್ಲ ಸಮರ್ಥ ಗಾಯಕ ಮೂಲ ಜನಪದ ಗಾಯಕ ಪರಂಪರೆಯಲ್ಲಾಗಲಿ; ಹವ್ಯಾಸಿ ಕಲಾವಿದರ ಸಂದರ್ಭದಲ್ಲೆ ಆಗಲಿ ನಾನು ಗಮನಿಸಿದಂತೆ ಇನ್ನೊಬ್ಬರಿಲ್ಲ. ಜನಪದ ಗಾಯನ ಸಂಪ್ರದಾಯದ ಕಾವ್ಯ–ಗೀತೆಗಳನ್ನು ಕೇವಲ ಅನುಕರಣೆಯ ನೆಲೆಯಲ್ಲಿ ಕಲಿತವರಲ್ಲ ರಾಜಶೇಖರರು. ಅಂಥ ಸಂಪ್ರದಾಯಗಳ ತಲಸ್ಪರ್ಶಿಯಾದ ಶಾಸ್ತ್ರೀಯ ಅರಿವನ್ನೂ ರಾಜಶೇಖರ ಅವರು ಪಡೆದಿರುವುದರಿಂದ ಅಂಥ ಕಾವ್ಯಗೀತೆಗಳನ್ನು ಹಾಡುವಾಗ ಅಲ್ಲಿ ಕೃತಕತೆ ಕಂಡುಬರುವುದಿಲ್ಲ. ಜನಪದ ಗಾಯಕರಾಗಿ ರಾಜಶೇಖರರು ದಾಖಲೆ ನಿರ್ಮಿಸಿರುವುದರ ರಹಸ್ಯ ಇದೇ ಆಗಿದೆ. ಜನಪದ ಕಾವ್ಯ ಹಾಗೂ ಮಟ್ಟುಗಳನ್ನು ರಾಜಶೇಖರ ಅವರು ಸಂಪಾದಿಸಲು ಪ್ರಾರಂಭಿಸಿ ಈಗ್ಗೆ ಮೂವತ್ತೈದು ವರ್ಷಗಳು ಕಳೆದಿವೆ. ಈ ಕಾಲಾವಧಿಯಲ್ಲಿ ಎಷ್ಟೋ ಜನಪದ ಕಲಾವಿದರು ಕಾಲವಾಗಿದ್ದಾರೆ. ಅಂಥ ಕಲಾವಿದರ ಸಮರ್ಥ ಉತ್ತರಾಧಿಕಾರಿಗಳಿಲ್ಲದೆ ಜನಪದ ಸಂಗೀತ ತನ್ನ ಮೂಲನೆಲೆಯಲ್ಲಿ ಸಾಕಷ್ಟು ಸೊರಗಿದೆ ಎನ್ನಬಹುದು. ಆದರೆ ಎಷ್ಟೋ ಜನಪದ ಮೂಲ ಮಟ್ಟುಗಳು ರಾಜಶೇಖರರ ನಿರ್ವಾಜ್ಯ ಮಮತೆಯಿಂದ ಉಳಿದಿವೆ. ಇಂದಿಗೂ ಆಕಾಶವಾಣಿಯಲ್ಲಿ ವೈವಿಧ್ಯಮಯ ಜನಪದ ಗೀತೆಗಳ ಉಲ್ಲೇಖವಿರುವ 'ಜನಪದ ರೂಪಕ'ಗಳು ಪ್ರಸಾರಗೊಳ್ಳುವ ಸಂದರ್ಭದಲ್ಲಿ ರಾಜಶೇಖರರ ನೆರವು ಆಕಾಶವಾಣಿಗೆ ಅನಿವಾರ್ಯವೆನಿಸುತ್ತದೆ.

ಜನಪದ ಗೀತ ಗಾಯನದಲ್ಲಿ 'ಮಹಾಕಾವ್ಯ'ಗಳನ್ನು ಹಾಡುವುದು ಎಂಥವರಿಗಾದರೂ ದೊಡ್ಡ ಸವಾಲೇ ಸರಿ. ಜಾನಪದದ ಮೂಲನೆಲೆಯಲ್ಲಿಯೇ ಮಹಾಕಾವ್ಯಗಳನ್ನು ಹಾಡುವ ಮಹಾನ್ ಗಾಯಕರ ಸಂಖ್ಯೆ ಕಡಿಮೆಯೆ. ಮಹಾಕಾವ್ಯಗಳಲ್ಲಿ ಗೀತಭಾಗದ ಜೊತೆ ಜೊತೆಯಲ್ಲಿಯೆ ಕಥನಕ್ರಮದ 'ವಚನಭಾಗ'ವೂ ಬರುತ್ತದೆ.

ಇಲ್ಲಿನ ವಚನ ರೂಪ ವಿನ್ಯಾಸದಲ್ಲಿ ಗದ್ಯದಂತೆ ಕಂಡರೂ ವಾಚನದ ನೆಲೆಯಲ್ಲಿ ಅದು ಸಂಗೀತಗಂಧಿಯೇ ಆಗುತ್ತದೆ. ಇಂಥವರ ಗಾಯನಕ್ಕೆ ವಿಶಿಷ್ಟ ಸಾಮರ್ಥ್ಯ ಬೇಕು. ಡಾ.ಪಿ.ಕೆ.ರಾಜಶೇಖರ ಇಂಥ ಹಲವು ಮಹಾಕಾವ್ಯಗಳನ್ನು ಸಮರ್ಥವಾಗಿ ಹಾಡುತ್ತಾರೆಂಬುದು ಅವರ ಪ್ರತಿಭಾ ವೈಶಿಷ್ಟ್ಯದ ಮಹಾಲಕ್ಷಣವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿರುವ ಬಹುತೇಕ ಮಹಾಕಾವ್ಯಗಳನ್ನು ಪಿ.ಕೆ. ರಾಜಶೇಖರ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಹಾಗಾಗಿ ಬೆಟ್ಟದ ಚಾಮುಂಡಿ, ಮಲೆಯ ಮಾದೇಶ್ವರ, ಪಿರಿಯಾಪಟ್ಟಣದ ಕಾಳಗ, ಜನಪದ ಮಹಾಭಾರತ, ಮಂಟೇಸ್ವಾಮಿ ಕಾವ್ಯ, ಬಿಳಿಗಿರಿರಂಗಸ್ವಾಮಿ ಕಾವ್ಯ, ಜನಪದ ಬಸವಪುರಾಣ, ಕರಪಾಲದ ಕಾವ್ಯಗಳು, ಜನಪದ ರಾಮಾಯಣ-ಇತ್ಯಾದಿ ಕಾವ್ಯಗಳನ್ನು ಪಿ.ಕೆ.ಆರ್. ಲೀಲಾಜಾಲವಾಗಿ ಹಾಡಬಲ್ಲರು. ಮಾದೇಶ್ವರ ಮಹಾಕಾವ್ಯದ ಸಂಕಮ್ಮನ ಪ್ರಸಂಗ, ಬೆಟ್ಟದ ಚಾಮುಂಡಿ ಕಾವ್ಯದ ಉತ್ತನಳ್ಳಿ ಮಾರಮ್ಮನ ಸನ್ನಿವೇಶ, ಮಂಟೇಸ್ವಾಮಿ ಕಾವ್ಯದ ಕೆಂಪಾಚಾರಿ ಕುಲುಮೆ ಸಂದರ್ಭ, ದೊಂಬಿದಾಸರು ಹಾಡುವ ಗಂಗೇ-ಗೌರಿ ಜಗಳದ ಭಾಗ - ಇತ್ಯಾದಿ ಕಾವ್ಯ ತುಣುಕುಗಳನ್ನು ಕೇಳಿರುವ ಸಹೃದಯರೇ ಮತ್ತೆ ಮತ್ತೆ ಕೋರಿ ಹಾಡಿಸಿ ಕೇಳಿ ಆನಂದಿಸುತ್ತಾರೆ. ಈ ಕಾವ್ಯಭಾಗಗಳನ್ನು ಹಾಡುವ ತನ್ಮಯತೆ ಮತ್ತು ಪ್ರಸ್ತುತಿಯ ಪ್ರಕರ್ಷತೆಯಿಂದಾಗಿ ಅನೇಕ ಯುವ ಗಾಯಕರ ಮೇಲೆ ರಾಜಶೇಖರರು ಪ್ರಭಾವ ಬೀರಿದ್ದಾರೆ.

ಮಹಾಕಾವ್ಯಗಳ ಸಂದರ್ಭದಲ್ಲಿ ಹೇಳಬೇಕಾದ ಮತ್ತೊಂದು ವಿಚಾರವೆಂದರೆ, ರಾಜಶೇಖರ ಅವರಿಗೆ ಒಂದೇ ಕಾವ್ಯದ ಬೇರೆ ಬೇರೆ ಗಾಯನ ಸಂಪ್ರದಾಯಗಳು ಹಾಗೂ ಗಾಯಕ-ವ್ಯಕ್ತಿ ವೈಶಿಷ್ಟ್ಯದ ಅರಿವಿರುವುದು. ಜನಪದ ಮಹಾಕಾವ್ಯಗಳ ಸಂಪಾದನೆ ಹಾಗೂ ಗಾಯನದಲ್ಲಿ ರಾಜಶೇಖರ ಅವರು ಅನನ್ಯ ಸ್ಥಾನವನ್ನು ಪಡೆದಿದ್ದಾರೆ.

ಎದೆಯೊಳಗಿನ ಪದವ ಬಿಟ್ಟುಬಿಡದಲೆ ಹಾಡುವುದು, ಹಾಡಿ ಕೇಳಿಸುವುದು, ಕಲಿಸುವುದು ಜನಪದ ಪ್ರವೃತ್ತಿಯೇ ಆಗಿದೆ. ಈ

ಪ್ರವೃತ್ತಿಯಿಂದ ರಾಜಶೇಖರರು ಹೊರತಾಗಿಲ್ಲ. ತಾವು ಸಂಪಾದಿಸಿದ, ಕಲಿತ ಹಾಡುಗಳನ್ನು ಅವರೆಂದೂ 'ಇವು ನನ್ನವು' ಎಂದು ಸ್ವಾರ್ಥ ನೆಲೆಯಿಂದ ಹೇಳಿಕೊಂಡಿಲ್ಲ. 'ಈ ಹಾಡುಗಳು ಒಂದರ್ಥದಲ್ಲಿ ಹಾಡಿದ ಮೂಲ ಗಾಯಕರದು, ಇನ್ನೊಂದರ್ಥದಲ್ಲಿ ಆ ಹಾಡಿಗೆ ಪ್ರೇರಣೆಯಾದ ದೇವರದು, ಮತ್ತೊಂದು ಅರ್ಥದಲ್ಲಿ ಸಮಸ್ತ ಕನ್ನಡಿಗರದು' ಎಂದು ರಾಜಶೇಖರ ಅವರೇ ಒಂದೆಡೆ ಹೇಳಿದ್ದಾರೆ. ಅದರಂತೆ ನಾಡವರ ಈ ಹಾಡುಗಳನ್ನು ನಾಡವರಿಗೆ ಕೇಳಿಸುವ, ಕಲಿಸುವ ಕಾರ್ಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜನಪದ ಗೀತೆಗಳನ್ನು ಕೇಳುವ ಆಸಕ್ತ ಸಹೃದಯರು ಎಷ್ಟೇ ದೂರಲ್ಲಿದ್ದರೂ, ಇಡೀ ದಿನ ಪ್ರಯಾಣ ಮಾಡುವಂಥ ಸಂದರ್ಭವಿದ್ದರೂ ಆಯಾಸವನ್ನು ಲೆಕ್ಕಿಸದೆ ಹೋಗಿ ಹಾಡಿ ಬರುವ ಕಾರ್ಯದಲ್ಲಿ ಅವರು ಈಗಲೂ ತೊಡಗಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಅವರ ಗಾಯನ ವೃಂದದಲ್ಲಿರುವ ಯುವಗಾಯಕರೇ ಇಂಥ ಆಯಾಸಕ್ಕೆ ಹೆದರಿ ಹಿಂದೇಟು ಹಾಕುವುದುಂಟು. ಆದರೆ 'ಕಲಿತ ಋಣವ ಹಾಡಿಯೇ ತೀರಿಸಬೇಕು' ಎಂದು ಪಣ ತೊಟ್ಟಿರುವ ರಾಜಶೇಖರರು ಆಸಕ್ತ ಆತ್ಮೀಯರು ಕರೆದೆಡೆಗೆಲ್ಲಾ ಹೋಗಿ ಹಾಡುತ್ತಿರುತ್ತಾರೆ. ಹಾಗಾಗಿ ಅವರು ಮೈಸೂರಿಗೆ ದೂರಲ್ಲಿರುವ ಚಿಕ್ಕಮಗಳೂರು, ಶಿವಮೊಗ್ಗ, ಬಳ್ಳಾರಿ, ದಕ್ಷಿಣ ಕನ್ನಡ ಇತ್ಯಾದಿ ಜಿಲ್ಲೆಗಳಿಗೆಲ್ಲಾ ತಮ್ಮ ವೃಂದದೊಂದಿಗೆ ತೆರಳಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಕನ್ನಡ ಸಂಸ್ಕೃತಿಯ ಪ್ರತೀಕವಾಗಿರುವ, ಕನ್ನಡ ಸಂಗೀತದ ಸಂಕೇತವಾಗಿರುವ ಜನಪದ ಗೀತ ಗಾಯನ ತರಬೇತಿ ಶಿಬಿರಗಳ' ನಿರ್ದೇಶಕರಾಗಿ, ಸಂಚಾಲಕರಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಸಾರ್ಥಕವಾಗಿ ದುಡಿದಿದ್ದಾರೆ. ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗಳು ಸಂಯುಕ್ತವಾಗಿ, ಕೆಲವೊಮ್ಮೆ ಪ್ರತ್ಯೇಕವಾಗಿ ವ್ಯವಸ್ಥೆಗೊಳಿಸಿದ ಜಾನಪದ ಗೀತ ಗಾಯನ ತರಬೇತಿ ಶಿಬಿರಗಳಲ್ಲಿ ರಾಜಶೇಖರರು ಜನಪದ ಗೀತೆಗಳನ್ನು ಆಸಕ್ತರಿಗೆ

ಪ್ರೀತಿಯಿಂದ ಕಲಿಸಿದ್ದಾರೆ.

'ಶಿಷ್ಟ ಸಂಗೀತದ ಬೇರು' ಎನಿಸಿಕೊಂಡಿರುವ ಜನಪದ ಸಂಗೀತಕ್ಕೆ ಸೂಕ್ತ ಸ್ಥಾನಮಾನ ದೊರಕಬೇಕೆಂದು ರಾಜಶೇಖರರು ಸಹಜವಾಗಿಯೇ ಹಂಬಲಿಸುತ್ತಾರೆ; ಪೂರಕವಾಗಿ ಕಾರ್ಯೋನ್ಮುಖರಾಗುತ್ತಾರೆ. ಲಾಗಾಯ್ತಿನಿಂದಲೂ ಮೈಸೂರು ಅರಮನೆಯ ದರ್ಬಾರ್ ಸಭಾಂಗಣದಲ್ಲಿ ಜನಪದ ಗೀತಗಾಯನಕ್ಕೆ ಅವಕಾಶ ದೊರೆತಿರಲಿಲ್ಲ. ರಾಜರ ಆಳ್ವಿಕೆಯಲ್ಲಿ ಇಂಥ ಅವಕಾಶ ದೊರಕದಿರುವುದು ಸಹಜ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ-ಮಹಾರಾಜರ ದಸರಾ ನಾಡಹಬ್ಬವಾಗಿ ಪರಿವರ್ತಿತವಾದ ಮೇಲೂ ಅಂಥ ಅವಕಾಶ ಲಭ್ಯವಾಗದಿದ್ದುದು ವಿಪರ್ಯಾಸ ಎನಿಸಿತ್ತು. ಅವಕಾಶ ನೀಡಲೇಬೇಕು ಎನ್ನುವ ಕಾರಣದಿಂದ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉಪಸಮಿತಿಯು ಜನಪದ ಗೀತಗಾಯನ ಕಾರ್ಯಕ್ರಮಕ್ಕೆ ವಸ್ತು ಪ್ರದರ್ಶನದ ವೇದಿಕೆ ಮತ್ತು ಚಾಮುಂಡಿಬೆಟ್ಟದ ದೇವಾಲಯದ ಪಕ್ಕದ ವೇದಿಕೆಯಲ್ಲಿ ಅವಕಾಶ ಕಲ್ಪಿಸುತ್ತಿತ್ತು. ಅಂಥ ಸಂದರ್ಭದಲ್ಲಿ, ೧೯೯೫ರಲ್ಲಿ ಜರುಗಿದ ದಸರಾ ಮಹೋತ್ಸವ ಸಂದರ್ಭದಲ್ಲಿ ಸಾಂಸ್ಕೃತಿಕ ಉಪಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ಡಾ.ಪಿ.ಕೆ. ರಾಜಶೇಖರ ಅವರು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರೆದುರು ಜನಪದ ಸಂಗೀತದ ಹಿರಿಮೆಯನ್ನು ವಿವರಿಸಿ, ಬಡಪಟ್ಟಿಗೆ ಒಪ್ಪದಿದ್ದ ಕೆಲವರನ್ನು ಮನವೊಲಿಸಿ ಮೊಟ್ಟಮೊದಲ ಬಾರಿಗೆ ಜನಪದ ಸಂಗೀತಕ್ಕೆ ಮೈಸೂರು ಅರಮನೆಯ ದರ್ಬಾರ್ ಸಭಾಂಗಣದಲ್ಲಿ ಅವಕಾಶ ದೊರಕುವಂತೆ ಮಾಡಿದರು. ಇದೊಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ.

ಜನಪದ ಮೂಲಮಟ್ಟುಗಳನ್ನು ನಾಡಿನಾದ್ಯಂತ ಪ್ರಚಾರ ಮಾಡಬೇಕೆಂಬ ಉದ್ದೇಶದಿಂದ ಡಾ.ರಾಜಶೇಖರ ಅವರು ಕೆಲವು ಜನಪದ ಗೀತೆಗಳ ಧ್ವನಿಸುರುಳಿಗಳನ್ನು ಬಿಡುಗಡೆಗೊಳಿಸಿದ್ದಾರೆ. ಅವುಗಳಲ್ಲಿ ೧೯೮೪ರಲ್ಲಿ ಬಿಡುಗಡೆಯಾದ ಧ್ವನಿಸುರುಳಿ 'ಮಲೆ ಮಾದೇಶ್ವರ' ಬಹು ಜನಮನ್ನಣೆ ಪಡೆದಿದ್ದು ಮಾರಾಟದಲ್ಲಿ

ಹೊಸ ದಾಖಲೆಯನ್ನೇ ನಿರ್ಮಿಸಿದೆ. ಅನೇಕ ಹೊಸ ಗಾಯಕ–ಗಾಯಕಿಯರಿಗೆ ಅದರಲ್ಲಿ ಅವಕಾಶ ಮಾಡಿಕೊಟ್ಟದ್ದು ಒಂದು ವಿಶೇಷ. ಇಪ್ಪತ್ತು ವರ್ಷಗಳ ತರುವಾಯದಲ್ಲಿಯೂ ಆ ಧ್ವನಿಸುರುಳಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ಅನಂತರದಲ್ಲಿ ಬಿಡುಗಡೆಗೊಂಡ 'ಕೋಗಿಲಾಗಿ ಕೂಗುತೀಯಲ್ಲೋ', 'ನಕ್ಕರೆ ನಗಲೇಳು', 'ಶರಣು ಶರಣು ಮಾದೇಶ್ವರಗೆ', 'ಸಿರಿ ಚುಂಚನಗಿರಿ' ಮುಂತಾದ ಧ್ವನಿಸುರುಳಿಗಳು ಕೂಡ ತಮ್ಮೊಳಗಿನ ಸೊನೆ–ಬನಿಯುಕ್ತ ಜನಪದ ಗೀತೆಗಳಿಂದ ಜನಪ್ರಿಯವಾಗಿವೆ.

ಜನಪದ ಗೀತೆಗಳು ವ್ಯಾಪಕವಾಗಿ ಪ್ರಚಾರಗೊಳ್ಳಬೇಕು. ಅವುಗಳ ಕಲಿಕೆ ಮತ್ತು ಪ್ರಸಾರ ಶಿಷ್ಟ–ಗ್ರಾಮೀಣ ಪರಿಸರವೆನ್ನದೆ ನಿರಾತಂಕವಾಗಿ ನಡೆಯಬೇಕು ಎಂಬ ಹಂಬಲದ ರಾಜಶೇಖರರು ಈ ನಿಟ್ಟಿನಲ್ಲಿ ಕೆಲವು ಮಹತ್ವದ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದದ್ದು ಜನಪದ ಗೀತೆಗಳನ್ನು ಅವುಗಳನ್ನು ಹಾಡುವ ವಿಧಾನದ ಸ್ವರ ಪ್ರಸ್ತಾರದೊಡನೆ ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆ, ದೂರಶಿಕ್ಷಣ ಜನಪ್ರಿಯವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಶಾಸ್ತ್ರೀಯ ಸಂಗೀತದ ಪ್ರಾಥಮಿಕ ಜ್ಞಾನವಿರುವ ಯಾರೊಬ್ಬರೂ ಸುಲಭವಾಗಿ ಕಲಿಯಲು ಸಾಧ್ಯವಾಗುವಂತೆ ಈ ಬಗೆಯ ಸ್ವರಪ್ರಸಾರಯುಕ್ತ ಪುಸ್ತಕವೊಂದು ಸದ್ಯದಲ್ಲೇ ಹೊರಬರಲಿದೆ. ಜನಪದ ಸಂಗೀತ ಕ್ಷೇತ್ರಕ್ಕೆ ಈಗಾಗಲೇ ಅಮೂಲ್ಯ ಕಾಣಿಕೆಗಳನ್ನು ನೀಡಿರುವ ರಾಜಶೇಖರರು ತಮ್ಮ ಮುಂದಿನ ಕಾರ್ಯಯೋಜನೆಗಳನ್ನು ಸಾಕಾರಗೊಳಿಸುವ ಮೂಲಕ ತಾವು ಅಪಾರವಾಗಿ ಪ್ರೀತಿಸುವ ಜನಪದ ಸಂಗೀತ ಕ್ಷೇತ್ರಕ್ಕೆ ಮತ್ತೂ ಮಹತ್ವದ ಕಾಣಿಕೆಗಳನ್ನು ಸಲ್ಲಿಸಿದ್ದಾರೆ.

'ಜಾನಪದ ವಿದ್ವಾಂಸ', 'ಜಾನಪದ ತಜ್ಞ' ಇಂಥ ವಿಶೇಷಣಗಳಿಗಿಂತ 'ಜನಪದ ಸಂಗೀತಗಾರ' ಎಂಬ ವಿಶೇಷಣಕ್ಕೆ ವೈಯಕ್ತಿಕವಾಗಿ ಹೆಚ್ಚು ಸಂಭ್ರಮಿಸುವ ಡಾ.ರಾಜಶೇಖರರ ಜನಪದ ಸಂಗೀತಕ್ಕೆ ಸಂಬಂಧಿಸಿದ ಅನ್ವೇಷಕ ಪ್ರವೃತ್ತಿ ಇನ್ನೂ ನಿಂತಿಲ್ಲ. ಅವಿನಾಶಿ ಗುಣದ

ಜಾನಪದವನ್ನು ಅನವರತವೂ ಶೋಧಿಸುತ್ತಿರುವ ಪಿ.ಕೆ.ಆರ್.ಜನಪದ ಸಂಗೀತಗಾರರಾಗಿ ಎಂದೂ ನಿವೃತ್ತಿಯಾಗುವುದಿಲ್ಲ. ಅವರು ಇನ್ನೂ ಎಷ್ಟೋ ಕಾಲ ಹೀಗೆಯೇ ಹಾಡುತ್ತಿರುತ್ತಾರೆ. ನಿರಂತರ ಜಾನಪದವನ್ನೇ ಉಸಿರಾಡುತ್ತಾ ತಮ್ಮ ದೀಕ್ಷಾಗುರು ಡಾ.ರಾಗೌ ಅವರಿಂದ 'Mr. Folklore' ಎಂದು ಸಾರ್ಥಕವಾಗಿ ಕರೆಸಿಕೊಂಡ ಡಾ.ಪಿ.ಕೆ.ರಾಜಶೇಖರ ಅವರನ್ನು ಜನಪದ ಸಂಗೀತ ಲೋಕದ 'ಬಾಲಮುರಳಿಕೃಷ್ಣ' ಎಂದೋ, 'ಭೀಮಸೇನ್ ಜೋಷಿ' ಎಂದೋ ಕರೆದರೆ ಖಂಡಿತ ಅತಿಶಯೋಕ್ತಿ ಎನಿಸದು. ಜನಪದ ಸಂಗೀತಗಾರನಾಗಿ ಡಾ.ಪಿ.ಕೆ.ರಾಜಶೇಖರ ಅವರು ವಿಶ್ವವೇದಿಕೆಯಲ್ಲಿ ಜನಪದ ಗೀತಗಾಯನ ಕಾರ್ಯಕ್ರಮವನ್ನು ನೀಡಿ ಒಂದರ್ಥದಲ್ಲಿ ವಿಶ್ವಮಾನ್ಯತೆಯನ್ನು ಗಳಿಸಿದ್ದಾರೆ. ೨೦೦೮ರ ಆಗಸ್ಟ್ ತಿಂಗಳಿನಲ್ಲಿ ಅಮೆರಿಕಾದ ಚಿಕಾಗೋ ನಗರದಲ್ಲಿ ಜರುಗಿದ ಐದನೆಯ 'ಅಕ್ಕ ವಿಶ್ವ ಕನ್ನಡ ಸಮ್ಮೇಳನ'ದಲ್ಲಿ ಪಿ.ಕೆ.ಆರ್. ನೇತೃತ್ವದ ಹೊನ್ನಾರು ಜನಪದ ಗಾಯನ ವೃಂದ ಕನ್ನಡ ಜನಪದ ಗೀತೆಗಳನ್ನು ಪ್ರಚುರಪಡಿಸಿರುವುದು ದಾಖಲಾರ್ಹ ಸಂಗತಿಯಾಗಿದೆ. 'ಅಕ್ಕ' ಬಳಗವೇ ಸ್ವಯಂ ಬಯಸಿ ನಿರ್ಧಾರ ಕೈಗೊಂಡು ಈ ವೃಂದವನ್ನು ಆಹ್ವಾನಿಸಿದ್ದು ವಿಶೇಷವಾಗಿದೆ. ಭಾರತವನ್ನೂ ಒಳಗೊಂಡಂತೆ ವಿಶ್ವದ ನಾನಾ ಕಡೆಗಳಿಂದ ಬಂದು ಸಮಾವೇಶಗೊಂಡಿದ್ದ 'ವಿಶ್ವ ಕನ್ನಡಿಗರು' ಮೂಲಮಟ್ಟಿನ ಜನಪದಗೀತೆಗಳನ್ನು ಆಲಿಸಿ ಆನಂದವನ್ನು ಅನುಭವಿಸಿದ್ದಲ್ಲದೆ ತಮ್ಮ ತಾಯಿನೆಲದ ಸಾರ್ಥಕ ನೆನಪುಗಳನ್ನು ಮೆಲುಕು ಹಾಕಿ ಸಂಭ್ರಮಿಸಿದರು.

ಐದನೆಯ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಪಿ.ಕೆ.ಆರ್. ಹಾಗೂ ವೃಂದದವರು ಹಾಡಿದ ಕನ್ನಡ ಜನಪದ ಗೀತೆಗಳ ಸೊನೆ–ಬನಿಗಳ ಸಾರಕ್ಕೆ ಮುದಗೊಂಡ ಇಲಿನಾಯ್ಸ್ ರಾಜ್ಯದ ಅನೇಕ ಅಮೆರಿಕ ಕನ್ನಡಿಗರು ತಮ್ಮ ತಮ್ಮ ಮನೆಗಳಿಗೆ ಹೊನ್ನಾರು ಜನಪದ ಗಾಯಕರನ್ನು ಆಹ್ವಾನಿಸಿ, ಆಸಕ್ತ ಸಹೃದಯರ ಸಮ್ಮುಖ ಹಾಡಿಸಿ ಆನಂದಿಸಿದರು. ಹೀಗೆ ಡಾ.ಪಿ.ಕೆ.ರಾಜಶೇಖರ ಅವರು ವಿಶ್ವದಲ್ಲೇ ಅತಿ ಹೆಚ್ಚು ಆಧುನಿಕರೆನಿಸಿರುವ ಅಮೆರಿಕ ಕನ್ನಡಿಗರ ಸಮಕ್ಷಮದಲ್ಲಿ

ಮೂಲಮಟ್ಟು, ಮೂಲ ಸಾಹಿತ್ಯ ಮತ್ತು ಮೂಲವಾದ್ಯ ಬಳಕೆಯ ಸಮ್ಮೇಳನದ ಜನಪದ ಗೀತಗಾಯನ ಕಾರ್ಯಕ್ರಮವನ್ನು ನಡೆಸಿಕೊಟ್ಟ ಏಕೈಕ ಗಾಯಕ ಎಂಬ ವಿಶೇಷ ಕೀರ್ತಿಗೆ ಪಾತ್ರರಾಗಿದ್ದಾರೆ.

ಕನ್ನಡ ಜನಪದ ಸಂಗೀತ ಕ್ಷೇತ್ರದಲ್ಲಿನ ರಾಜಶೇಖರ ಅವರ ಸಾಧನೆಯನ್ನು ಗುರುತಿಸಿ ಕನ್ನಡದ ಜನಪ್ರಿಯ ದೂರದರ್ಶನವಾದ ಈಟಿವಿ ವಾಹಿನಿಯು ತಾನು ಪ್ರಸಾರ ಮಾಡುತ್ತಿರುವ ವಿಶಿಷ್ಟ ಕಾರ್ಯಕ್ರಮವಾದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮಕ್ಕೆ ಇವರನ್ನು ತೀರ್ಪುಗಾರ-ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ ಆದರಿಸಿದೆ. ಭಾರತದ ಅತ್ಯಂತ ಮಹತ್ವದ ಗಾಯಕರಾದ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ನಡೆಸಿಕೊಡುವ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಪಾಲ್ಗೊಂಡ ರಾಜಶೇಖರ ಅವರು ರಾಜ್ಯವ್ಯಾಪಿ ಪ್ರಸಾರದ 'ಈ ಟಿವಿ' ಕನ್ನಡ ವಾಹಿನಿಯಲ್ಲಿಯೂ ಮೂಲಮಟ್ಟಿನ ಜನಪದ ಗೀತೆಯನ್ನು ಹಾಡಿದ್ದಲ್ಲದೆ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ವಿಶೇಷ ಪ್ರಶಂಸೆಗೆ ಪಾತ್ರರೂ ಆಗಿದ್ದಾರೆ.

ಜಾನಪದ ಕ್ಷೇತ್ರದಲ್ಲಿ ಅತ್ಯದ್ಭುತ ಸಾಧನೆ ಮಾಡಿ 'ಶ್ರೀಮಾನ್ ಜಾನಪದ' ಎಂದು ಸಾರ್ಥಕವಾಗಿ ಕರೆಸಿಕೊಂಡ ರಾಜಶೇಖರ ಅವರು ಸೃಜನಶೀಲ ಬರಹಗಾರರೂ ಆಗಿದ್ದಾರೆ. ಅನೇಕ ಲೇಖಕರಂತೆ ಇವರು ಕೂಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಕವಿಯಾಗಿ. ೧೯೬೬ರಷ್ಟು ಹಿಂದೆಯೆ ಡಾ.ರಾಜಶೇಖರ ಅವರು 'ಮಾನಸದೀಪ್ತಿ' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ವಸ್ತು ವೈಶಿಷ್ಟ್ಯ, ಕಾವ್ಯ ಶಿಲ್ಪ, ನಾದಮಾಧುರ್ಯ ಹಾಗೂ ಗೇಯಗುಣಗಳಿಂದಾಗಿ ಇಲ್ಲಿನ ಕವನಗಳು ಗಮನಸೆಳೆಯುವುದನ್ನು ಅಂದು ಕೃತಿ ಬಿಡುಗಡೆ ಮಾಡಿದ ಕನ್ನಡದ ಶ್ರೇಷ್ಠ ಕವಿಗಳೂ ವಿಮರ್ಶಕರೂ ಆದ ಪ್ರೊ.ಸುಜನಾ ಅವರು ಗುರುತಿಸಿದ್ದರು. ಜೊತೆಗೆ ರಾಜಶೇಖರ ಅವರು ಕವಿಯಾಗಿ ಖಂಡಿತ ಬೆಳೆಯಬಲ್ಲವರು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಮುಂದೆ ೧೯೬೮ರಲ್ಲಿ ಇಂಗ್ಲೀಷ್‌ನಿಂದ ಅನುವಾದಿಸಿದ ಕವನಗಳ ಸಂಕಲನ

'ಪ್ರತಿಬಿಂಬ'ವನ್ನು ಪಿ.ಕೆ.ಆರ್. ಬೆಳಕಿಗೆ ತಂದರು. ಇಂಗ್ಲಿಷ್ ಸಾಹಿತ್ಯ ಲೋಕದ ದಿಗ್ಗಜ ಕವಿಗಳಾದ ವಿಲಿಯಮ್ ವರ್ಡ್ಸ್‌ವರ್ತ್, ವಿಲಿಯಮ್ ಬ್ಲೇಕ್, ಬೆನ್‌ಜಾನ್‌ಸನ್, ರಾಬರ್ಟ್ ಬರ್ನ್ಸ್, ಅಲೆಗ್ಸ್ಯಾಂಡರ್ ಪೋಪ್, ಜಾನ್ ಕೀಟ್ಸ್ ಮುಂತಾದವರ ಕವನಗಳ ಅನುವಾದಗಳು ಇಲ್ಲಿವೆ. ಇಲ್ಲಿನ ಅನುವಾದಿತ ಕವನಗಳ ಬಗ್ಗೆ ವಿಮರ್ಶಕರೊಬ್ಬರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಇಲ್ಲಿನ ಅನುವಾದಗಳನ್ನು ಇವುಗಳ ಮೂಲ ರಚನೆಗಳಿಗೆ ಹೋಲಿಸಿದರೆ ಅವರು ಕೈಗೊಂಡಿರುವ ಕೆಲಸ ಬಹುಪಾಲು ಸಫಲವಾಗಿದೆ ಎನ್ನಿಸುತ್ತದೆ. ಮೂಲದ ರಚನೆಗಳನ್ನು ಮನಸ್ಸಿಗೆ ತಂದುಕೊಳ್ಳದೆ ಓದಿದರೆ ಖುಷಿ ಕೊಡುವ ಪ್ರಯತ್ನಗಳು ಇಲ್ಲಿವೆ ಎನ್ನಬಹುದು. ಇಲ್ಲಿನ ಭಾಷೆ ಅಥವಾ ಶೈಲಿಯಲ್ಲಿ ಪೆಡಸಿಲ್ಲ; ಲಯದಲ್ಲಿ ಕುಂಟಿಲ್ಲ, ಅಡೆತಡೆ ಇಲ್ಲ" ಬಹುಶಃ ಇಷ್ಟಾದರೆ ಸಾಕು, ಅನುವಾದ ಯಶಸ್ವಿಯಾದಂತೆಯೆ. ಈ ನಿಟ್ಟಿನಲ್ಲಿ ಡಾ.ಪಿ.ಕೆ.ರಾಜಶೇಖರ ಅವರು ಯಶಸ್ವಿ ಅನುವಾದಕ ಕವಿ ಎಂಬುದು ಸಾಬೀತಾಗುತ್ತದೆ.

ಸ್ವರೂಪದಲ್ಲಿ 'ಪ್ರತಿಬಿಂಬ' ಕೃತಿಯನ್ನು ಹೋಲುವ ಮತ್ತೊಂದು ಕವನ ಸಂಕಲನವನ್ನೂ ಪಿ.ಕೆ.ಆರ್.ಹೊರತಂದಿದ್ದಾರೆ. ಅದು 'ಸ್ವಾತಿಮುತ್ತುಗಳು' ಎಂಬ ಹೆಸರಿನ ಸಂಸ್ಕೃತ ಸುಭಾಷಿತಗಳ ಕನ್ನಡಾನುವಾದದ ಕೃತಿ. ಇದರಲ್ಲಿ ಒಟ್ಟು ನೂರೊಂದು ಸುಭಾಷಿತಗಳಿವೆ. ಸಂಸ್ಕೃತದ ಸುಮಾರು ಮೂವತ್ತನಾಲ್ಕು ಪ್ರಸಿದ್ಧ ಸುಭಾಷಿತ ಗ್ರಂಥಗಳಿಂದ ಆಯ್ದ ಒಳ್ನುಡಿಗಳು ಇಲ್ಲಿ ಕನ್ನಡೀಕರಣಗೊಂಡಿವೆ. ಇಲ್ಲಿನ ಅನುವಾದಗಳನ್ನೂ ವಿದ್ವಾಂಸರು 'ಸುಕವಿ ಹೃದಯವುಳ್ಳ ಅನುವಾದ ಸಿದ್ಧಹಸ್ತ ಪ್ರತಿಭೆಯಿಂದ ಸಾಧಿತವಾದವು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಸಾಹಿತ್ಯ ಸಂಶೋಧನೆ, ಸಂಪಾದನೆ, ವಿಶ್ಲೇಷಣೆ–ವಿಮರ್ಶೆ, ಪ್ರಕಟಣೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರೂ ತಮ್ಮ ಸೃಜನಶೀಲ ಸಾಮರ್ಥ್ಯವನ್ನು ಕುಂಠಿತಗೊಳಿಸಿಕೊಳ್ಳಲಿಲ್ಲ. ೨೦೦೧ರಲ್ಲಿ ಪ್ರಕಟವಾದ 'ನಾನಲ್ಲದ ನಾನು' ಕವನ ಸಂಕಲನ ಇದಕ್ಕೆ ಸಾಕ್ಷಿಯಾಗಿದೆ. ಇದೊಂದು ಸಂಕೀರ್ಣ ಬಗೆಯ ಕವನಗುಚ್ಛವಾಗಿದ್ದು

ಇದರಲ್ಲಿ ಕಥನಕವನಗಳು, ಸುನೀತಗಳು, ಚುಟುಕಗಳು ಹಾಗೂ ವಚನಗಳು ಸೇರಿವೆ. ಪರಿಷ್ಕಾರಗೊಂಡ ಶೈಲಿ, ಪರಿಣಾಮಕಾರಿ ಅಭಿವ್ಯಕ್ತಿ, ಸಮಕಾಲೀನ ಸಂಗತಿಗಳಿಗೆ ಸ್ಪಂದನ, ಕಾವ್ಯಾಪೇಕ್ಷಿತ ಬಂಧ ಹಾಗೂ ಧ್ವನಿರಮ್ಯತೆ–ಇವುಗಳಿಂದ ಇಲ್ಲಿನ ಕವನಗಳು ಗಮನಾರ್ಹವೆನಿಸುತ್ತವೆ. ಪಿ.ಕೆ.ರಾಜಶೇಖರ ಜಾನಪದ ಕ್ಷೇತ್ರದಲ್ಲಿನ ತಮ್ಮ ಚಟುವಟಿಕೆಗಳಿಗೆ ಸಮಾನಾಂತರವಾಗಿ ಕಾವ್ಯಕೃಷಿಯನ್ನು ನಡೆಸದೆ ಹೋದದ್ದು ಹಾಗೂ ಕನ್ನಡ ವಿಮರ್ಶಾಲೋಕ ಆರಂಭಿಕ ಹಂತದಲ್ಲಿ ಇವರ ಕಾವ್ಯಕ್ಕೆ ಅಗತ್ಯ ಗಮನ ಕೊಡದಿದ್ದುದು ಕಾರಣವಾಗಿ ಪಿ.ಕೆ.ಆರ್.ಕವಿಯಾಗಿ ದೊಡ್ಡಸ್ಥಾನವನ್ನು ಇದುವರೆವಿಗೂ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಹಾಗಿದ್ದು ರಾಜಶೇಖರ ಅವರು ಕಾವ್ಯ ರಚನೆಯನ್ನು ಬಿಟ್ಟುಕೊಟ್ಟಿಲ್ಲ ಎಂಬುದು ಗಮನಾರ್ಹ.

ಕವಿತಾ ರಚನೆಯ ಜೊತೆಗೆ ಭಾಷಾವಿಜ್ಞಾನಕ್ಕೆ ಸಂಬಂಧಪಟ್ಟ ಎರಡು ಮಹತ್ವದ ಕೃತಿಗಳನ್ನು ರಾಜಶೇಖರ ಅವರು ಬರೆದಿದ್ದಾರೆ. 'ಪದವಿವರಣ ಕೋಶ' ಮತ್ತು 'ಪದ ಸಂಪದ' ಎಂಬೆರೆಡು ಗ್ರಂಥಗಳು ಈ ಬಗೆಯವು. ಶೀರ್ಷಿಕೆಗಳೇ ಸೂಚಿಸುವಂತೆ ಈ ಕೃತಿಗಳಲ್ಲಿ ಕನ್ನಡದಲ್ಲಿ ಬಳಕೆಯಲ್ಲಿರುವ ಕೆಲವು ವಿಶಿಷ್ಟ ಪದಗಳ ಮೂಲ, ನಿಷ್ಪತ್ತಿ, ಅರ್ಥವಿಸ್ತಾರ, ಅರ್ಥ ಸಂಕೋಚಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಪದಗಳ ಸಂದರ್ಭದಲ್ಲಿ ಉಂಟಾಗುವ ಧ್ವನಿವ್ಯತ್ಯಾಸ, ರೂಪವ್ಯತ್ಯಾಸ, ಅರ್ಥವ್ಯತ್ಯಾಸ, ಸಾಮ್ಯಮೂಲ ವ್ಯತ್ಯಾಸ, ಭಾಷಾ ಸ್ವೀಕರಣ ನೆಲೆಗಳ ಚರ್ಚೆಯನ್ನು ಇಲ್ಲಿ ಕಾಣಬಹುದಾಗಿದೆ. ರಾ.ಯ.ಧಾರವಾಡಕರ್, ಡಾ.ಹಂಪನಾ, ಪ್ರೊ.ಎಂ.ಎಚ್.ಕೃಷ್ಣಯ್ಯ ಅವರು ಬರೆದಿರುವ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಚರ್ಚಿಸಲಾಗಿರದ ಅನೇಕ ಪದಗಳನ್ನು ಕುರಿತಾದ ವಿಶ್ಲೇಷಣೆ ಇಲ್ಲಿರುವುದು ವಿಶೇಷ. ಬೇರೆ ವಿದ್ವಾಂಸರಿಗೆ ಬಹುಶಃ ಕಷ್ಟಸಾಧ್ಯವಾಗಬಹುದಾದ ಜಾನಪದ ಹಿನ್ನೆಲೆಯ ಶಬ್ದಗಳ ನಿಷ್ಪತ್ತಿಯನ್ನು ವಿವರಿಸಿರುವುದು ಈ ಕೃತಿಗಳ ಹೆಚ್ಚುಗಾರಿಕೆಯಾಗಿದೆ. ಪ್ರಧಾನವಾಗಿ ವಿದ್ಯಾರ್ಥಿಗಳನ್ನು ಉದ್ದೇಶವಾಗಿರಿಸಿಕೊಂಡು ರಚಿತಗೊಂಡಿರುವ ಈ ಕೃತಿಗಳು ತನ್ನ

ಉದ್ದೇಶದ ವ್ಯಾಪ್ತಿಯನ್ನೂ ಮೀರಿ ಸಾರ್ಥಕ್ಯ ಕಂಡಿದೆ ಎನ್ನಬಹುದು.

ಡಾ.ರಾಜಶೇಖರ ಅವರ ಜಾನಪದೇತರ ಕೃತಿಗಳಲ್ಲಿ ಜೀವನ ಚರಿತ್ರೆ, ಅಭಿನಂದನಾ ಗ್ರಂಥ, ಸಂಸ್ಮರಣಾ ಗ್ರಂಥ ಹಾಗೂ ಸಂಕೀರ್ಣ ಸ್ವರೂಪದ ಹೊತ್ತಗೆಗಳು ಸೇರಿವೆ. ವೀರಯೋಧ ಬೆಳ್ಳಿಯಪ್ಪ, ಸಮಾಜಸೇವಾರತ್ನ, ರಜತಶ್ರೀ, ಶಿವಸಂಪದ, ಸಂಜೀವಿನಿ, ಮಣ್ಣಿನ ಹಣತೆ, ಅಭಿಜ್ಞಾನ ಶಾಕುಂತಲ ನಾಟಕದ ಕಥೆ, ಅಭಿನವ ಕಾಳಿದಾಸ, ದಲಿತ ಭಾರತ, ಮಾಳವಿಕಾಗ್ನಿಮಿತ್ರ ನಾಟಕದ ಕಥೆ, ಬೆಟ್ಟದಪುರದ ಬಸವಶಿಲ್ಪ, ವಿದ್ಯಾವಿಶಾರದೆ ಕಂತಿ ಇತ್ಯಾದಿ ಕೃತಿಗಳು ಈ ಗುಂಪಿನಲ್ಲಿ ಬರುತ್ತವೆ. ಇವುಗಳಲ್ಲಿ ಅಭಿಜ್ಞಾನ ಶಾಕುಂತಲ ನಾಟಕದ ಕಥೆಗೆ ಹಾಗೂ ಮಾಳವಿಕಾಗ್ನಿಮಿತ್ರ ನಾಟಕದ ಕಥೆ ಕೃತಿಗಳು ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡಿದ್ದು ಮಹಾಕವಿ ಕಾಳಿದಾಸನ ಎರಡು ಪ್ರಮುಖ ನಾಟಕಗಳ ಅಂತರಂಗವನ್ನು ಗದ್ಯರೂಪದಲ್ಲಿ ಅನಾವರಣಗೊಳಿಸುತ್ತವೆ. ಸಂಸ್ಮರಣ ಹಾಗೂ ಅಭಿನಂದನಾ ಗ್ರಂಥಗಳು (ಶಿವಸಂಪದ ಮತ್ತು ಮಣ್ಣಿನ ಹಣತೆ) ಏಕವ್ಯಕ್ತಿ ಪ್ರಧಾನವಾದ ಗುಣಗಾನಾತ್ಮಕ ಕೃತಿಗಳಾಗದೆ ಸಾರ್ವತ್ರಿಕ ಪರಾಮರ್ಶನ ಗ್ರಂಥಗಳ ಸ್ವರೂಪವನ್ನು ಪಡೆದಿರುವುದು ವಿಶೇಷವಾಗಿದೆ. ಯಾವುದೇ ಬಗೆಯ ಕೃತಿಯಾಗಿರಲಿ, ಅದು ಹತ್ತರೊಳಗೊಂದಾಗುವಂತೆ ಬರೆಯುವುದು ರಾಜಶೇಖರರ ಜಾಯಮಾನವಲ್ಲ; ಬರೆವ, ಪ್ರಕಟಿಸುವ ಒಂದೊಂದು ಕೃತಿಗೂ ಅನನ್ಯತೆ ಇರುವಂತೆ ನೋಡಿಕೊಳ್ಳುವುದು ಇವರ ವೈಶಿಷ್ಟ್ಯ. ಡಾ.ಪಿ.ಕೆ.ರಾಜಶೇಖರ ಅವರ ಸಾಧನೆಗೆ ಸಾರ್ಥಕವಾದ ಪ್ರಶಸ್ತಿ ಪುರಸ್ಕಾರಗಳು ಲಭ್ಯವಾಗಿವೆ. ಸಂಶೋಧನಾ ವಿದ್ಯಾರ್ಥಿಯಾಗಿದ್ದಲೇ ಪ್ರಕಟಿಸಿದ 'ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ' ಕೃತಿಗೆ ೧೯೭೩ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. ಇದು ರಾಜಶೇಖರರ ಉತ್ಸಾಹವನ್ನು ಹೆಚ್ಚಿಸಿತಲ್ಲದೆ ಸವಾಲಿನ ಸಾಹಸಯಾತ್ರೆಯನ್ನು ಕೈಗೊಳ್ಳಲು ಪ್ರೇರಣೆ ನೀಡಿತು. ೧೯೯೦ ರಲ್ಲಿ ಇವರು ಸಂಪಾದಿಸಿ ಪ್ರಕಟಿಸಿದ 'ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ' ಗ್ರಂಥಕ್ಕೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನಿತ್ತು ಗೌರವಿಸಿತು.

೧೯೯೮ರಲ್ಲಿ ಇದೇ ಅಕಾಡೆಮಿಯು ನೀಡುವ 'ಜಾನಪದ ತಜ್ಞ' ಪ್ರಶಸ್ತಿಯನ್ನು ರಾಜಶೇಖರ ಅವರು ಪಡೆದುಕೊಂಡರು. ಇವರ ಒಟ್ಟು ಸಾಧನೆಯನ್ನು ಗುರುತಿಸಿದ ಕರ್ನಾಟಕ ರಾಜ್ಯ ಸರ್ಕಾರವು ೨೦೦೫ರಲ್ಲಿ ಇವರಿಗೆ 'ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದೆ. ೨೦೦೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಜತೋತ್ಸವ ಪ್ರಶಸ್ತಿಯನ್ನು ಇವರು ಪಡೆದುಕೊಂಡರು. ಪಿ.ಕೆ.ಆರ್. ಅವರ ನಿರಂತರವಾದ ವಿಶಿಷ್ಟ ಸಾಧನೆಯನ್ನು ಗುರುತಿಸಿದ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯು ೨೦೧೦ ರಲ್ಲಿ ವಿಶೇಷ ಪ್ರಶಸ್ತಿ ನೀಡಿ ಗೌರವಿಸಿದೆ.

ಹೀಗೆ ಅಕಾಡೆಮಿಯ ಪ್ರಶಸ್ತಿಗಳನ್ನು ಹಲವು ಬಾರಿ ಪಡೆದಿರುವ ಡಾ.ರಾಜಶೇಖರ ಅವರನ್ನು ವಿವಿಧ ಸಂಘ-ಸಂಸ್ಥೆಗಳು ಸಾರ್ಥಕ ಬಿರುದುಗಳನ್ನಿತ್ತು ಇವರನ್ನು ಗೌರವಿಸಿವೆ. 'ಜಾನಪದ ರತ್ನ ಭಂಡಾರ', 'ಜಾನಪದ ಕಲಾನಿಧಿ', 'ಜಾನಪದ ಗಾಯನ ರತ್ನ', 'ಜಾನಪದ ಸಾಹಿತ್ಯ ಭೂಷಣ', 'ಜಾನಪದ ಸಾರ್ವಭೌಮ'-ಇತ್ಯಾದಿ ಬಿರುದುಗಳು ರಾಜಶೇಖರ ಅವರನ್ನು ಅಲಂಕರಿಸಿವೆ.

ಬಿರುದು-ಬಾವಲಿ, ಪ್ರಶಸ್ತಿ-ಪುರಸ್ಕಾರಗಳಿಂದ ಉಬ್ಬಿ ಉತ್ಸಾಹವನ್ನು ಸ್ಥಗಿತಗೊಳಿಸಿಕೊಳ್ಳದ ಡಾ.ರಾಜಶೇಖರ ಅವರು ಜಾನಪದವನ್ನು ಮೈ-ಮನಸ್ಸಿಗೆ ಆವಾಹಿಸಿಕೊಂಡು ಇಡೀ ಜೀವಿತವನ್ನು ಕನ್ನಡ ಜಾನಪದದ ಉಳಿವು-ಉದ್ಧಾರಗಳಿಗಾಗಿ ಮೀಸಲಿರಿಸಿ ದುಡಿಯುತ್ತಿದ್ದಾರೆ. ಕ್ಷೇತ್ರಕಾರ್ಯದ ಬಗ್ಗೆ ಅಪಾರ ಆಸಕ್ತಿ ಹಾಗೂ ಜನಪದ ಕಲಾವಿದರ ಬಗ್ಗೆ ವಿಶೇಷ ಪ್ರೀತಿ ಗೌರವಗಳನ್ನಿರಿಸಿಕೊಂಡಿರುವ ರಾಜಶೇಖರ ಅವರ 'ಜಾನಪದ ಜೋಳಿಗೆ'ಯಲ್ಲಿ ಇನ್ನೂ ಹಲವು ವಿಶಿಷ್ಟ ಜನಪದ ಕಾವ್ಯಗಳು ಉಸಿರಾಡುತ್ತಿದ್ದು ಬೆಳಕು ಕಾಣಲು ಕಾತರಿಸುತ್ತಿವೆ. ಅತ್ಯಂತ ವಿಶಿಷ್ಟವಾದ ಬಗೆಯಲ್ಲಿ ಸಂಪಾದಿಸಿರುವ ಅಪರೂಪದ ಜನಪದ ಕಾವ್ಯ 'ಜನಪದ ಶರಣ ಮಹಾಸಂಪುಟ' ಸದ್ಯದಲ್ಲಿಯೇ ಪ್ರಕಟಗೊಳ್ಳಲಿದೆ. ತಾವು ಜತನದಿಂದ ಸಂಗ್ರಹಿಸಿರುವ ಜನಪದ ಕಾವ್ಯಗಳನ್ನೆಲ್ಲ ಪ್ರಕಟಿಸುವ

ಮೂಲಕ ಅವುಗಳನ್ನೆಲ್ಲ ಮತ್ತೆ ಕನ್ನಡಿಗರಿಗೆ ಅರ್ಪಿಸಬೇಕು ಎಂಬುದೇ ಅವರ ಜೀವನದ ಏಕೈಕ ಮಹಾ ಹಂಬಲವಾಗಿದೆ. ದೇಸಿ ಸಂಸ್ಕೃತಿಯ ಪ್ರಮುಖ ಆಕರಗಳಾಗಿರುವ ಜನಪದ ಕಾವ್ಯಗಳು ಪಿ.ಕೆ.ಆರ್.ಅವರೇ ಒಂದೆಡೆ ಹೇಳಿರುವಂತೆ ಸಮಸ್ತ ಕನ್ನಡಿಗರದು. ತಾನು ಸಂಗ್ರಹಿಸಿರುವ ಅಂತಹ ಕಾವ್ಯಗಳನ್ನು ಕನ್ನಡಿಗರಿಗೆ ಮತ್ತೆ ಗ್ರಂಥರೂಪದಲ್ಲಿ ಒಪ್ಪಿಸದಿದ್ದರೆ ಅದು ಕನ್ನಡ ದ್ರೋಹವಾಗುತ್ತದೆ ಎಂಬ ತಿಳುವಳಿಕೆ ರಾಜಶೇಖರ ಅವರದು. ಅದಕ್ಕಾಗಿಯೇ ಅವರು ಜಾನಪದಕ್ಕಾಗಿ ತನುಮನಧನಗಳನ್ನು ಅಕ್ಷರಶಃ ಮುಡಿಪಾಗಿಟ್ಟು ಶ್ರಮಿಸುತ್ತಿದ್ದಾರೆ. ಈ ಬಗೆಯ ಶ್ರಮವೇ ಅವರ ಜೀವನಕ್ರಮವಾಗಿದೆ. 'ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ' ಎಂಬ ಕವಿಮಾತಿನಂತೆ 'ಜಾನಪದವನುಳಿದೆನಗೆ ಬೇರೆ ಬದುಕಿಲ್ಲ' ಎಂದು ಬಾಳುತ್ತಿರುವ ಚೇತನ ಪಿ.ಕೆ.ರಾಜಶೇಖರ.

ಡಾ.ಪಿ.ಕೆ.ರಾಜಶೇಖರ ಅವರು ಕನ್ನಡ ಸಾಂಸ್ಕೃತಿಕ ಲೋಕದ ಅಪರೂಪದ ಚೇತನ, ಜಾನಪದ ಕ್ಷೇತ್ರದಲ್ಲಿನ ಇವರ ಸಾಧನೆ ಅನನ್ಯ. ಜಾನಪದ ತಜ್ಞ, ಜಾನಪದ ವಿದ್ವಾಂಸ, ಜನಪದಗಾಯಕ, ಪರಿಶೋಧಕ, ಸಂಪಾದಕ ಇತ್ಯಾದಿ ನೆಲೆಗಳನ್ನು, ದಾಟಿ ನಿಂತಿರುವ ರಾಜಶೇಖರ ಅವರನ್ನು ಅವರ ದೀಕ್ಷಾ ಗುರುಗಳೂ ನಾಡಿನ ಶ್ರೇಷ್ಠ ಜಾನಪದ ವಿದ್ವಾಂಸರಾದ ಡಾ.ರಾಗೌ ಅವರು 'ಶ್ರೀಮಾನ್ ಜಾನಪದ' (Mr.Folklore) ಎಂದು ಕರೆದದ್ದು ಯಥೋಚಿತವಾಗಿದೆ. 'ಲೌಕಿಕ ವ್ಯವಹಾರಗಳಿಂದ ದೂರ ದೂರ ಸರಿದು ತನುವು ನಿನ್ನದೆ ಮನವು ನಿನ್ನದೆ ಎಂದು ಸಮಾಜಜೀವಿಯಾದ' ಡಾ.ಪಿ.ಕೆ.ರಾಜಶೇಖರ ಅವರ ಜಾನಪದ ಸಂಬಂಧಿ ಕನಸುಗಳೆಲ್ಲ ನನಸಾದರೆ ಅದರಿಂದ ಖಂಡಿತ ಕನ್ನಡಕ್ಕೆ ಬಹಳ ದೊಡ್ಡ ಉಪಕಾರವಾಗುತ್ತದೆ. ಈಗಾಗಲೇ ಆಗಿರುವ ಉಪಕಾರವಾದರೂ ಕನ್ನಡಿಗರು ಖಂಡಿತ ಸುಲಭವಾಗಿ ತೀರಿಸಲಾಗದ ಋಣವಾಗಿದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ರೈತ ಕುಟುಂಬದಿಂದ ಹೊರ ಹೊಮ್ಮಿದ ಅಪ್ಪಟ ಜನಪದ ಪ್ರತಿಭೆ ಪಿ.ಕೆ.ರಾಜಶೇಖರ್. ಕನ್ನಡ ಜನಪದ ಕ್ಷೇತ್ರದ ಮೇರು ವ್ಯಕ್ತಿತ್ವ, ರಾಜಶೇಖರ್ ಅವರು ಜಾನಪದದಲ್ಲಿ ಸಾಧಿಸಿರುವಂಥದ್ದು ಎಂಥವರನ್ನು ಬೆರಗು; ವಿಸ್ಮಯಗೊಳಿಸುವಂಥದ್ದು. ವ್ಯಾಪಕ ಕ್ಷೇತ್ರಕಾರ್ಯ, ನಿರಂತರ ದುಡಿಮೆ, ಜಾನಪದ ಬದ್ಧತೆ, ವೈಜ್ಞಾನಿಕ ಕ್ಷೇತ್ರಕಾರ್ಯ, ಶಾಸ್ತ್ರೀಯ ಸಂಗ್ರಹ ಮತ್ತು ಸಂಪಾದನೆಗೆ ಹೆಸರಾದವರು ಪಿ.ಕೆ.ರಾ. ಗೆಳೆಯ ಮೈಸೂರು ಕೃಷ್ಣಮೂರ್ತಿಯವರು ಪಿ.ಕೆ.ರಾಜಶೇಖರ್‌ರವರ ಬದುಕು ಮತ್ತು ಸಾಧನೆಗಳನ್ನು ಅತ್ಯಂತ ಸಾಂದ್ರವಾಗಿ ಪರಿಚಯಿಸಿದ್ದಾರೆ.

– ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦೦೫೪